ಶ್ರೀ

—॥ ಗಣೇಶಾಯ ನಮಃ ॥—

ಯಕ್ಷಗಾನ

ಚಂದ್ರಹಾಸ

ಅಥವಾ

ವಿಷಯಾ ಕಲ್ಯಾಣವು

ಸೈಂಟ್ ಜೋನ್ಸ್ ಹಾಯರ್ ಎಲಿಮೆಂಟರಿ ಶಾಲಾ
— ಮುಖ್ಯ ಅಧ್ಯಾಪಕರಾದ —
ಶ್ರೀ। ಜಿ. ಪರಮೇಶ್ವರ ಭಟ್ಟ
ಇವರಿಂದ ವಿರಚಿತವಾದುದು.

PUBLISHED BY THE AUTHOR.

ಕ್ರಯ: ೦–೮–೦]

ಶ್ರೀ

—॥ ಗಣೇಶಾಯ ನಮಃ ॥—

ಯಕ್ಷಗಾನ

ಚಂದ್ರಹಾಸ

ಅಥವಾ

ವಿಷಯಾ ಕಲ್ಯಾಣವು

ಸೈಂಟ್ ಜೋನ್ಸ್ ಹಾಯರ್ ಎಲಿಮೆಂಟರಿ ಶಾಲಾ
— ಮುಖ್ಯ ಅಧ್ಯಾಪಕರಾದ —
ಶ್ರೀ। ಜಿ. ಪರಮೇಶ್ವರ ಭಟ್ಟ
ಇವರಿಂದ ವಿರಚಿತವಾದುದು.

PUBLISHED BY THE AUTHOR.

ಕ್ರಯ: ೦—೮—೦] [Price: 0–8–0

ಪುಸ್ತಕಗಳು ಸೈಂಟ್ ಜೋನ್ಸ್ ಹಾಯರ್ ಎಲಿಮೆಂಟರಿ ಶಾಲೆ, ಜಪ್ಪು, ಮಂಗಳೂರು ಮತ್ತು ಬಿ. ವಿ. ಐತಾಳ, ಮಂಗಳಾದೇವಿ ದೇವಸ್ಥಾನ, ಮಂಗಳೂರು ಇಲ್ಲಿ ಸಿಗುತ್ತವೆ.

PRINTED AT
SRI NARAYAN GURU PRESS, MANGALORE.

— ಮುನ್ನುಡಿ —

ಸಾಹಿತಿಗಳಿಂದ "ಯಕ್ಷಗಾನ"ವು ಕ್ಷುದ್ರಕಾವ್ಯವೆಂದು ಗಣಿಸಲ್ಪಟ್ಟಿದೆಯಾದರೂ, ವಿದ್ವಾಂಸರಾದ ರಸಿಕರ ಮೆಚ್ಚುಗೆಗೆ ಸಾಕಷ್ಟು ಯೋಗ್ಯತೆ ಅದರಲ್ಲಿದೆ. ಹಾಡುವುದಕ್ಕೆ, ವೇಷಕಟ್ಟಿ ಆಡುವುದಕ್ಕೆ, ಅರ್ಥ ಮಾತಾಡುವುದಕ್ಕೆ—ಹೀಗೆ ವಿವಿಧ ವ್ಯವಸಾಯಗಳಿಗೆ, ಅವಕಾಶಗಳನ್ನಿತ್ತು, ಅಂತಹ ವ್ಯವಸಾಯಿಗಳಿಂದ ಜನಾಕರ್ಷಣೆಯನ್ನು ಪಡೆದುದರಿಂದಲೇ, ಯಕ್ಷಗಾನವು ಬಹು ಹಳೆಯ ಕಾಲದಿಂದ ತನ್ನ ವಿವಿಧ ಅಂಗಗಳಲ್ಲಿ, ವೃದ್ಧಿಯನ್ನು ಪಡೆದು, ಬೆಳೆಯುತ್ತ ಬಂದು, ಇಂದು ಬಹು ಜನಪುರಸ್ಕೃತವಾಗಿದ್ದು, ಮುಖ್ಯವಾಗಿ ನಮ್ಮ ಜಲ್ಲೆಯ ವಿದ್ವಜ್ಜನರಿಂದ ಶ್ಲಾಘ್ಯವಾಗಿದೆ. ಬಹುಜನ ವಿದ್ವಾಂಸರು ಇದರ ವ್ಯವಸಾಯದಲ್ಲಿ ಸೇರಿ, ಇದರ ಕಳೆಯನ್ನೇರಿಸಿದ್ದಾರೆಂಬುದು ಕನ್ನಡಿಗರೆಲ್ಲರಿಗೆ ಗೊತ್ತಿರುವ ವಿಷಯವಷ್ಟೆ ?

ಇಂಥ ಯಕ್ಷಗಾನ ಕಲಾ ವ್ಯವಸಾಯದಲ್ಲಿ ಸೇರಿ, ಯಕ್ಷಗಾನ ಕಾವ್ಯ ರಚನೆಯ ಮೂಲಕ, ತನ್ನದಾದ ಕನ್ನಡ ಸೇವೆಯನ್ನು ಸಲ್ಲಿಸುವ, ನಮ್ಮ ಶ್ರೀ ಜಿ. ಪರಮೇಶ್ವರ ಭಟ್ಟರು, ಯಕ್ಷಗಾನ ಉದ್ಯೋಗಿಗಳಿಂದ ಮಾತ್ರವಲ್ಲದೆ, ಸಮಸ್ತ ಕನ್ನಡಿಗರಿಂದಲೂ ಸ್ತುತ್ಯಾರ್ಹರೇ ಸರಿ. ಪಾಂಡಿತ್ಯವುಳ್ಳವರ ಪರಿಶ್ರಮದಿಂದಾದ ಕಾವ್ಯವು ಚೆಲುವಾಗಿರದೆ ಇದ್ದಿತೇ? ವ್ಯಾಕರಣ, ಛಂದಸ್ಸು, ಅಲಂಕಾರಾದಿಗಳ ನಿಯಮಗಳು, ಪಾಲಿಸಲ್ಪಡಲೇ ಬೇಕಾದರೂ, ಆ ನಿಯಮಗಳ ಕಾಠಿಣ್ಯವು ಭಾವಕ್ಕೆ ಭಂಗ ತರುವುದುಂಟೆಂದು ಯಕ್ಷಗಾನದಲ್ಲಿ ಅಂಥ ನಿಯಮಗಳನ್ನು ಸರ್ವತ್ರ ಪಾಲಿಸುವುದಿಲ್ಲ. "ದ್ರೌಪದೀ ಪ್ರತಾಪ" "ಕೃಷ್ಣಾರ್ಜುನ ಕಾಳಗ"—ಇಂತಹ ಕೆಲವು ಪ್ರಸಂಗಗಳಲ್ಲಿ, "ಮೋಡವಾಹನ–ಬೋಳಿಸುತ" ಇಂತಹ ಕೆಲವು ಅರಿಸಮಾಸ ಹಾಗೂ ಗ್ರಾಮ್ಯ ಶಬ್ಧಗಳು ಪ್ರಯೋಗಿಸಲ್ಪಟ್ಟದ್ದಿವೆ. ಅಂತೂ ಸಾಮಾನ್ಯರ ಮನಕ್ಕೆ ಗ್ರಾಹ್ಯವಾಗುವಂಥ, ಸುಲಭ ಪದಪ್ರಯೋಗದಿಂದಲೂ, ಪ್ರಾಸಬದ್ಧವಾಗಿ, ರಾಗ, ತಾಳ, ಲಯಕ್ಕೆ ಸಿಕ್ಕುವ ಸುಲಭ ಕ್ರಮದಿಂದಲೂ, ಇದ್ದರೆ ಯಕ್ಷಗಾನ ಕಾವ್ಯವು ಸಾಕಷ್ಟು ಕ್ರಮಬದ್ಧವಾಗಿದೆ ಎನ್ನಬಹುದು. ಪ್ರಾಸಬದ್ಧ ಪದ್ಯಗಳು ಹಾಡುವುದಕ್ಕೆ, ವಿತಂಡವಾದದ, (ಬೆದಂಡೆ) ಪದ್ಧತಿಯ ಸಂಭಾಷಣಾ ಕ್ರಮವು, ಅರ್ಥ ಮಾತಾಡುವು

ದಕ್ಕೆ, ವೀರ–ಭೀಭತ್ಸು–ರೌದ್ರರಸಗಳುಳ್ಳ ದೀರ್ಘ ಪದ್ಯಗಳು ಆಡುವುದಕ್ಕೆ, (ರಂಗಸ್ಥಳದಲ್ಲಿನ ನರ್ತನಕ್ಕೆ) ಬೇಕಾದುವುಗಳು. ಆದುದರಿಂದ ಈ ನಿಯಮ ಗಳು, ಯಕ್ಷಗಾನ ಕಾವ್ಯ ರಚನೆಯಲ್ಲಿ, ಪಾಲಿಸಲ್ಪಡುವುವುಗಳು. ಈ ನ್ಯಾಯ ಗಳನ್ನು ತಿಳಿದೇ ಈ ಹೊಸ ಕೃತಿಯು ಹುಟ್ಟಿದೆ ಎಂದು ಇದರ ವಾಚಕರಿಗೆ ಗೊತ್ತಾಗದಿರದು. ಹಾಡುವುದಕ್ಕೆ ಸುಲಭವಾಗಿ, ಸುಶ್ರಾವ್ಯವಾಗಿ, ಇದು ಪರಿಣಮಿಸೀತೆಂಬ ನಂಬಿಕೆಯಿದೆ. ಅರ್ಥ ವಿವೇಚನೆಯ ಕೌಶಲ್ಯವುಳ್ಳವರಿಗೆ ಇದು ಮನೋರಂಜಕವಾಗಿದೆ. "ಪರರಿಗೆಣಿಸಿದ ಕೇಡು ತನಗೆ ತಟ್ಟುವುದು" ಎಂಬ ನೀತಿಯನ್ನು ಉಪದೇಶಿಸುವ ಕಥೆ ಇರುವುದರಿಂದ, ಇದು ಬುದ್ಧಿ ಸಂತೃ ಪ್ತಿಯನ್ನುಂಟುಮಾಡುತ್ತದೆ. ಇಂದ್ರಿಯ, ಮನ, ಬುದ್ಧಿಗಳಿಗೆ, ತೋಷ ಕೊಡುವಂಥಾದ್ದು ಚಿತ್ತಕ್ಕೆ ಚೆಲುವೆಂದು ಗ್ರಾಹ್ಯವಾಗದಿದ್ದೀತೇ?

ಊನವಿಲ್ಲದ ಉದ್ಯೋಗವಿಲ್ಲ; ತಪ್ಪಿಲ್ಲದ ಕೃತಿಯಿರಲಿಕ್ಕಿಲ್ಲ. ಆದರೆ ಅಷ್ಟು ಸೂಕ್ಷ್ಮ ವಿಮರ್ಶೆ ನಮಗೆ ಸದ್ಯಕ್ಕನಗತ್ಯ. ಹಾಡುವ, ಅರ್ಥ ಮಾತಾಡುವ, ವೇಷಕಟ್ಟಿ ಆಡುವ, ದೃಷ್ಟಿಯಿಂದ ಇದು ಅನುಕೂಲವಾಗಿದೆ ಎಂದರೆ, ಅದೇ ಈ ಕೃತಿಗೆ ಸದ್ಯಕ್ಕೆ ಮಹಾಮನ್ನಣೆ. ಇನ್ನು ಇದಕ್ಕೆ ಬೇಕಾ ದುದೆಂದರೆ ಮಹಾಜನರ ಪ್ರೋತ್ಸಾಹ. ಈ ಕೃತಿಯು ಶ್ರೀ। ಭಟ್ಟರ ಪ್ರಥಮ ಪ್ರಯತ್ನ. ಜನ ಪ್ರೋತ್ಸಾಹದ ಪರಿಣಾಮದಿಂದ, ಇದಕ್ಕಿಂತಲೂ ಅಧಿಕ ವಾಗಿ ಸತ್ಕೃತಿಗಳು ಇವರಿಂದ ಹುಟ್ಟಿ, ರಸಿಕರಿಗೆ ಉಪಕಾರಿಗಳಾಗಲಿ, ಎಂದು ಬಯಸುತ್ತಾ, ಯಕ್ಷಗಾನ ರೂಪೀ ಪರಮಾತ್ಮನು ಇಂತಹ ಕಲಾ ವ್ಯವಸಾಯ ದಲ್ಲಿ ಇವರ ಉತ್ತರೋತ್ತರ ಅಭಿವೃದ್ಧಿಯನ್ನುಂಟುಮಾಡಲಿ, ಎಂದು ಶ್ರೀ ಹರಿಯನ್ನು ಪ್ರಾರ್ಥಿಸುತ್ತೇನೆ.

Mangaladevi Temple,
Mangalore.

ಮಂ. ಶ. ಸಾಮಂಗ ಹರಿದಾಸ.

— ಪ್ರಸ್ತಾವನೆ —

ಯಕ್ಷಗಾನ "**ಚಂದ್ರಹಾಸ**" ಅಥವಾ "**ವಿಷಯಾಕಲ್ಯಾಣ**"ವನ್ನು ವಾಚಕರ ಮುಂದಿಡಲು, ತುಂಬಾ ಸಂತೋಷವನ್ನು ವ್ಯಕ್ತ ಪಡಿಸುತ್ತೇನೆ. ಜೈಮಿನಿ ಭಾರತವನ್ನು ಓದುತ್ತಿದ್ದಾಗ, ಚಂದ್ರಹಾಸನ ಕಥೆಯು ನನ್ನ ಮನಸ್ಸನ್ನು ಅತಿಯಾಗಿ ಆಕರ್ಷಿಸಿತು. ನಮ್ಮ ಯಕ್ಷಗಾನ ಬಂಧುಗಳ ಸೌಲಭ್ಯಕ್ಕಾಗಿ ಅದನ್ನು "ಯಕ್ಷಗಾನ" ರೂಪದಲ್ಲಿ ಬರೆದೆನು. ಹೀಗೆ ಬರೆಯುತ್ತಿದ್ದಾಗ "ಯಕ್ಷಗಾನ" ದೃಷ್ಟಿಯಿಂದ ಒಂದೆರಡು ಕಡೆ ಸ್ವಲ್ಪ ವ್ಯತ್ಯಾಸ ಪಡಿಸಬೇಕಾಗಿ ಬಂತು. ಆದುದರಿಂದ ಕವಿ ಸ್ವಾತಂತ್ರ್ಯವನ್ನವಲಂಬಿಸಿ, "ಮೇಧಾವಿ, ಚಂದ್ರಾಂಗರ" ಯುದ್ಧದ ಪ್ರಕರಣವೂ, ಚಂದ್ರಹಾಸ ದಿಗ್ವಿಜಯದಲ್ಲಿ "ಸುನಂದ ಭೂಪನ" ಯುದ್ಧವೂ ಕಲ್ಪಿಸಿ ಬರೆದುದಾಗಿದೆ.

ಯಕ್ಷಗಾನ ಹೊಸ ಕೃತಿಗಳು ಹೊರ ಬೀಳದೆ ಕೆಲವು ವರ್ಷಗಳು ಗತಿಸಿದುವು. ಎಲ್ಲಾ ಸಾಹಿತ್ಯಗಳೂ ಪ್ರಗತಿಯ ಪಥದಲ್ಲಿ ಮುಂದರಿಯುತ್ತಿರುವಾಗ ಯಕ್ಷಗಾನ ಸಾಹಿತ್ಯವು ಮುಂದರಿಯಬೇಕಾದ ಅಗತ್ಯವಿದೆ. ಹೊಸ ಹೊಸ ರೀತಿಯ ಯಕ್ಷಗಾನ ಪ್ರಬಂಧಗಳನ್ನು ಬರೆಯು ವಂತೆಯೂ, ಪ್ರಕಟವಾಗುವಂತೆಯೂ ಮಾಡುವ ಹೊಣೆಗಾರಿಕೆಯು ಸಹೃದಯ ಹೃದಯರಾದ ವಾಚಕರನ್ನೇ ಅವಲಂಬಿಸಿರುತ್ತದೆ.

ಬಡತನದಿಂದ ನರಳುತ್ತಿರುವ ನಾಡಿನಲ್ಲಿ ಸಾಹಿತ್ಯವಾದರೂ ಬೆಳೆಯುವದೆಂತು? ಪ್ರಕೃತ ಆರ್ಥಿಕ ದುಸ್ಥಿತಿಯು ಬಡ ಕವಿಯಾದ ನನ್ನನ್ನೂ ಬಾಧಿಸದೆ ಬಿಡಲಿಲ್ಲ. ಬರೆದ "ವಿಷಯಾ ಕಲ್ಯಾಣ"ವನ್ನು ಕೃಪಾದೃಷ್ಟಿಯಿಂದ ನೋಡಿ ತಮ್ಮ ಅಮೂಲ್ಯ ಸಮಯವನ್ನು ಹಾಳುಮಾಡಿಯಾದರೂ, ನನ್ನ ಏಳಿಗೆಯನ್ನೇ ಹಾರೈಸಿ, ತಿದ್ದಿಕೊಟ್ಟು ಉತ್ತಮ ಸಲಹೆಗಳನ್ನಿತ್ತ, ಗುರುವರ್ಯ "ಶ್ರೀ। ಮೊಳೆಯಾರು ಶಂಕರ ನಾರಾಯಣ ಭಟ್ಟ್"ವಿದ್ವಾನ್, ಸರಕಾರ ಕಲಾ ಶಾಲೆಯ ಕನ್ನಡ ಪಂಡಿತರವರ ಉದಾರ ಗುಣವನ್ನು ನೆನೆಯದಿರಲಾರೆನು. ಸರಕಾರ ಕಲಾ ಶಾಲೆಯ ನಿವೃತ್ತ ಮುಖ್ಯ ಅಧ್ಯಾಪಕರಾದ, ಶ್ರೀ। ಮೊಂತೆರೋ ಬಿ. ಎ., ಯಲ್. ಟಿ., ಕೇಸರಿ ಇಹಿಂದ್, ಇವರು ನನ್ನ ಅಚ್ಚುಮೆಚ್ಚಿನ ಗುರುಗಳಾಗಿದ್ದು, ನನ್ನ ಮೇಲೆ ಅತೀ ಪ್ರೀತಿಯನ್ನಿಟ್ಟು, ನನಗಿತ್ತ ಪ್ರೋತ್ಸಾಹ, ಮತ್ತು ಸಹಾ

ಯಕ್ಕೂ ಅದರಂತೆಯೇ ನನಗೆ ನೆರವಿತ್ತ ಶ್ರೀ। ಬಿ. ವಿ. ಐತ್ತಾಳರಿಗೂ, ಮಿತ್ರ ಶ್ರೀ।ನಾಗೇಶನವರಿಗೂ. ಶ್ರೀ। ರಾಜೀವನವರಿಗೂ, ಶ್ರೀ।ಯಸ್. ಕೆ. ಶೆಟ್ಟರಿಗೂ, ಶ್ರೀ। ಕೆ. ಐ. ಭಟ್ಟರಿಗೂ, ಡಾಕ್ಟರ್ ಗೌರಿ ಶಂಕರರಾಯರಿಗೂ, ವರ್ತಕ ಸಂಘದ ಸನ್ಮಿತ್ರ ವರ್ಗಕ್ಕೂ, ವಿ. ಬಿ. ಯಕ್ಷಗಾನ ಸಂಘಕ್ಕೂ, ನನ್ನ ಹೃತ್ಪೂರ್ವಕ ವಂದನೆಗಳನ್ನರ್ಪಿಸುತ್ತೇನೆ. ಇನ್ನು ಅನೇಕ ಮಹನೀಯರು ನನಗೆ ನೆರವಿತ್ತಿರುವರು ಅವರ ಹೆಸರುಗಳನ್ನು ಪ್ರತ್ಯೇಕ ಬರೆಯಬೇಕಾಗಿಲ್ಲ. ಅವರೆಲ್ಲರನ್ನೂ ಸದಾ ನೆನೆಯುತ್ತಲೇ ಇರುವೆನು.

ಪುಸ್ತಕವನ್ನು ಓದಿ ನೋಡಿ, ಯಕ್ಷಗಾನದಲ್ಲಿರುವ ಅಭಿಮಾನದಿಂದ ಮುನ್ನುಡಿಯನ್ನು ದಯಪಾಲಿಸಿದ ಪೂಜ್ಯ ಯಕ್ಷಗಾನ ಕಲಾಕೋವಿದರಾದ ಶ್ರೀ। ಮು. ಶ. ಸಾಮಗ ಹರಿದಾಸ ಇವರಿಗೂ, ಅತ್ಯಲ್ಪ ಸಮಯದಲ್ಲೇ ಅತಿ ಸುಂದರವಾಗಿ ಅಚ್ಚು ಹಾಕಿಸಿಕೊಟ್ಟ ಶ್ರೀ ನಾರಾಯಣ ಗುರು ಪ್ರೆಸ್ಸಿನ ಮೆನೇಜಿಂಗ್ ಡೈರೆಕ್ಟರರಾದ ಶ್ರೀ। ಮಂಗಳೂರು ಜಾರಪ್ಪನವರಿಗೂ, ಶ್ರೀ। ಕೆ. ಕೃಷ್ಣರಾಯರಿಗೂ, ನನ್ನ ಕೃತಜ್ಞತೆಯನ್ನು ಅರ್ಪಿಸುತ್ತೇನೆ.

ಮೊದಲ ಪ್ರಯತ್ನದ ಮೊಗ್ಗೆಯಿದು. ಇದನ್ನು ಅರಳಿಸಿ ಸುವಾಸನೆಯನ್ನು ಹರಡುವಂತೆ ಮಾಡುವ ಯತ್ನವು ಮಹಾಜನರ ಕೈಯಲ್ಲಿರುವುದು. ವಿದ್ವಜ್ಜನರ ಕೃಪಾಕಟಾಕ್ಷದ ಟೀಕೆಗಳನ್ನು ಗಮನಿಸಿ, ಮುಂದಿನ ಮುದ್ರಣದಲ್ಲಿ ಬೇಕಾದ ಬದಲಾವಣೆಗಳನ್ನು ಮಾಡಲು, ನಿರ್ಧರಿಸಿರುವೆನು. ಯಕ್ಷಗಾನ ಕಲಾಭಿಮಾನಿಗಳು ಪ್ರೋತ್ಸಾಹಿಸಬೇಕಾಗಿ ಬೇಡಿಕೊಳ್ಳುವ,

ವಿದ್ವಜ್ಜನರ ಚರಣಕಿಂಕರ,

G. Parameshwara Bhat,
Head-Master,
St. John's H. E. School, Jeppu,
Mangalore, S. K.

Mangaladevi Temple,
Mangalore.

ಈ "ಕುಸುಮ"ವನ್ನು ನನ್ನ ಗುರುವರ್ಯರಾದ

ಮಂಗಳೂರು ಸರಕಾರ ಕಲಾಶಾಲೆಯ ಕನ್ನಡ ಅಧ್ಯಾಪಕರಾದ

ಶ್ರೀ| ಮೊಳೆಯಾರು ಶಂಕರನಾರಾಯಣ ಭಟ್ಟ, ವಿದ್ವಾನ್

ಇವರ ದಿವ್ಯ ಚರಣಂಗಳಲ್ಲಿ

— ಕಾಣಿಕೆಯಾಗಿ ಅರ್ಪಿಸುತ್ತೇನೆ. —

ಜಿ. ಪಿ. ಭಟ್ಟ

ಪಾತ್ರ ಪರಿಚಯ.

೧.	ಮೇಧಾವಿ	—	ಕೇರಳದ ರಾಜ
೨.	ಮಂತ್ರಿ	—	ಕೇರಳರಾಜನ ಸಚಿವ
೩.	ಚಂದ್ರಾಂಗ	—	ಕಾಶ್ಮೀರ ರಾಜ
೪.	ಚಾರಕ	—	ಕಾಶ್ಮೀರ ರಾಜನ ಕಡೆ
೫.	ದುಷ್ಟಬುದ್ಧಿ	—	ಕುಂತಳೇಶನ ಸಚಿವ
೬.	ವಿಪ್ರರು	—	ಕುಂತಳ ರಾಜ್ಯದವರು
೭.	ಕಟುಕರು	—	ದುಷ್ಟಬುದ್ಧಿ ಕಡೆಯವರು
೮.	ಕುಳಿಂದ	—	ಚಂದನಾವತಿಯ ರಾಜ
೯.	ವಿಪ್ರರು	—	ಚಂದನಾವತಿಯವರು
೧೦.	ಚಂದ್ರಹಾಸ	—	ಕಥಾನಾಯಕ
೧೧.	ಸುನಂದ	—	ಕಾಂಭೋಜ ರಾಜ
೧೨.	ಚರರು	—	ಕಾಂಭೋಜ ದೇಶದವರು
೧೩.	ದೂತರು	—	ಚಂದ್ರಹಾಸನ ಕಡೆ
೧೪.	ಮದನ	—	ದುಷ್ಟಬುದ್ಧಿಯ ಮಗ
೧೫.	ವೀರಸೇನ	—	ಕುಂತಳ ರಾಜ
೧೬.	ಗಾಲವ	—	ವೀರಸೇನನ ಪುರೋಹಿತ
೧೭.	ಸರ್ಪ	—	
೧೮.	ಪೂಜೆ ಭಟ್ಟ	—	ಚಂಡಿಕಾಲಯದ ಅರ್ಚಕ
೧೯.	ಚಿತ್ರಲೋಚನೆ	—	ಚಂದ್ರಹಾಸನ ತಾಯಿ
೨೦.	ದೂತಿ	—	ಚಂದ್ರಹಾಸನ ಜೀವದಾತೆ
೨೧.	ಮೇಧಾವಿನಿ	—	ಕುಳಿಂದ ಪತ್ನಿ
೨೨.	ವಿಷಯೆ	—	ಕಥಾನಾಯಿಕೆ
೨೩.	ಸಖಿ	—	ವಿಷಯೆಯ ಸಖಿ
೨೪.	ಚಂಪಕಮಾಲಿನಿ	—	ಕುಂತಳೇಶನ ಸುತೆ
೨೫.	ಪ್ರೇತಗಳು	—	
೨೬.	ಪಾರ್ವತಿ	—	ಚಂಡಿಕೆ ಪ್ರತ್ಯಕ್ಷವಾದ್ದುದು.



|| ಶ್ರೀ ಗಣೇಶಾಯ ನಮಃ ||

ಯಕ್ಷಗಾನ

ಚಂದ್ರಹಾಸ

ಅಥವಾ

ವಿಷಯಾ ಕಲ್ಯಾಣ

ಶಾರ್ದೂಲವಿಕ್ರೀಡಿತವೃತ್ತ

ಶ್ರೀ ರಾಮಂ ಹನುಮಾದಿ ವಂದಿತಪದಂ ಕಾರುಣ್ಯಕಲ್ಪದ್ರುಮಂ | ಘೋರಾರಾತಿ ಭಯಂಕರಂ ಶುಭಕರಂ ಸಾಕೇತ ರಾಜ್ಯಾಧಿಪಂ || ತಾರಾರಾಜ ಸತೇಜಕೋಟಿ ಸಹಿತಂ ವಾಗೀಶ್ವರೀ ಪೂಜಿತಂ | ಮಾರೀಚಾದಿ ಸಮಸ್ತ ರಾಕ್ಷಸ ಹರಂ ಸೀತಾಪತಿಂ ಭಾವಯೇ ||

ನಾಟ—ರೂಪಕ

ಜಯ ಶ್ರೀ ಮೂಷಿಕವಾಹನ | ಜಯ ಗಣನಾಥನೆ ಪಾವನ | ಜಯ ಶಿವ ಜಾತದಯಾಘನ | ಜಯ ಜಯ ಗುಣ ಸದನಾ || ಜಯ ಸುರಮುನಿ ಸುತ ಸಜ್ಜನ | ಜಯ ಭವವಿಪಿನಹುತಾಶನ | ಜಯ ಮಂಗಳಮತಿ ಮೋಹನ| ಜಯ ಜಯ ಗಜವದನಾ || ೧ || ಹಣೆಗಣ್ಣನ ಸುಕುಮಾರನೆ | ಗುಣದೊಳು ಶರಧಿಸಮಾನನೆ| ಗಣ ಗಡಣಾಂಬುಧಿ ಚಂದ್ರನೆ| ಬಣಗರಹಣಿಸಿದನೇ|| ಮಣಿಮಯ ಮಕುಟದಿ ಮೆರೆವನೆ | ಮಣಿಯುವೆ ಗಣಪ ಸುಶೀಲನೆ | ಗಣಪತೆ

ದುರಿತವ ಕಳೆವನೆ । ತೃಣಯುಕುಮಾರಕನೇ ॥ ೨ ॥ ಅಜಹರಿವಂದಿತೆ ಪೂಜಿತೆ । ಕುಜನರ ತರಿಯುತೆ ನಲಿಯುತೆ । ಸುಜನರ ನಯದಿಂ ಸಲಹುತೆ । ಗಜಮುಖ ಪ್ರಿಯ ಮಾತೇ ॥ ರಜತ ಗಿರೀಶನನೊಲಿಸುತೆ । ಭಜಕರ ತಂಡವ ಪೊರೆಯುತೆ । ಸುಜನೋದ್ಧಾರಿಣಿ ನಯಹಿತೆ । ನಿಜವಲಿ ಶೈಲಸುತೇ ॥ ೩ ॥

ವಾರ್ಧಿಕ

ಹರಿಯ ವಂದಿಸಿ ಹರುಷದಿಂದ ಹರನಿಂಗೆರಗಿ । ಸುರರ ನೆನೆದಾ ಗಿರಿಜೆ ಶಾರದೆಯರಂ ನಮಿಸಿ । ವರಮಹಾ ವಾಲ್ಮೀಕಿ ಮೊದಲಾದ ಕವಿವರರ ದಿವ್ಯ ನಾಮವ ಮನದೊಳೂ ॥ ಸ್ಥಿರಗೊಳಿಸಿ ಜನನಿ ಜನಕರ ಪಾದಪದ್ಮಗಳ। ಸ್ಮರಿಸುತತಿ ಕರುಣದಿಂ ಪಾರ್ವತೀ ತನಯನಂ । ಕರಮುಗಿದು ಬೇಡುತ್ತೆಮಗುಳೆ ವಾಣಿಯೊಳೆಂಬೆ ಮತ್ಕೃತಿಯ ಸಲಹುವಂತೇ ॥ ೧ ॥

ದ್ವಿಪದಿ

ಇನಿತೆಲ್ಲರಿಂಗೆ ಕೈಮುಗಿದು ತಲೆವಾಗೀ । ಚಿನುಮಯಾತ್ಮಕ ಪಂಚಲಿಂಗ ನಿಂಗೆರಗೀ ॥ ೧ ॥ ಆ ಮಹಾ ಭಾರತ ಪೌರಾಣ ಶರಧಿಯಲೀ । ಭೂಮಿಪಗೆ ಜೈಮಿನಿಯು ಪೇಳ್ದ ಕಥನದಲೀ ॥ ೨ ॥ ಹರಿಭಜಕ ಶಶಿಹಾಸ ಮೆರೆದ ಸಂಗತಿಯಾ । ಹರುಷದಿಂದೊರೆಯುವೆನು ಪರಮ ಸತ್ಕಥೆಯಾ ॥ ೩ ॥ ಪ್ರಾಸ ಗಣಯತಿ ವಿಷಮ ಸಂಧಿಯೋಗಗಳಾ । ಲೇಸೆನಿಪ ಕವಿಯುಕ್ತಿ ಸರಸವಚನಗಳಾ ॥ ೪ ॥ ನ್ಯೂನತೆಗಳಿರಲದರ ತಿದ್ದಿ ಬಲ್ಲವರೂ । ಮಾನಿಸುತೆ ಕವಿತೆಯನು ಮೆರೆಸಿ ಕೋವಿದರೂ ॥ ೫ ॥

ಸೌರಾಷ್ಟ್ರ ತ್ರಿವುಡೆ

ತಿರೆಯಧಿಪ ಜನಮೇಜಯಂಗಾ । ಕರುಣಿ ಜೈಮಿನಿ ಮುನಿಪ ಭಾರತ । ವರ ಕಥೆಯ ನೊರೆಯುತ್ತಲಿರಲತಿ । ಹರುಷದಿಂದಾ ॥ ೧ ॥ ಒಂದು ದಿನ ಮುನಿಪಾದಪದ್ಮಕೆ । ವಂದನೆಯಗೈವುತ್ತ ಭೂಪತಿ । ಮಂದಹಾಸದಿ ಕೇಳ್ದನತ್ಯಾ । ನಂದದಿಂದಾ ॥ ೨ ॥ ಹೇ ದಯಾನಿಧಿ ಕರುಣಸಾಗರ । ಶ್ರೀಧವನ ನಿಜ ಭಕ್ತನೆನಿಸಿದ । ಮೇದಿನೀಪತಿ ಚಂದ್ರಹಾಸನ । ನಾದಿ ಕಥೆಯಾ ॥ ೩ ॥ ಬಿತ್ತರಿಸಬೇಕೆನಲು ಭೂಪನ । ಹತ್ತಿರದಿ ಕುಳ್ಳಿರಿಸಿ ಮುನಿಪನು । ಚಿತ್ತಜಾರಿಯ ಸಖನ ನೆನೆದವ । ಮತ್ತೆ ನುಡಿದಾ ॥ ೪ ॥

ವಾರ್ಧಿಕ

ಧರಣಿಪತಿ ಜನಮೇಜಯನಾಖ್ಯ ನೀಲಾಲಿಪುದು। ತಿರೆಯೊಳುತ್ತಮವೆನಿಸಿ ಮೆರೆಯುತಿಹ ಕೇರಳದಿ। ಪರಮ ಸದ್ಗುಣವಂತ ಮೇಧಾವಿಯೆಂದೆಂಬಧುರ ಪರಾಕ್ರಮಿಯೋರ್ವನು ‖ ತರುಣಿ ಮೊದಲಾದೆಂಟು ತೆರನ ಭಾಗ್ಯಗಳಿಂದ। ಸಿರಿವರನ ಚರಣಂಗಳಂ ನೆನೆಯುತೋಲಗವ। ವಿರಚಿಸುತ ಭೂಪಕುಲದೀಪ ಮಂತ್ರೀಶನೊಡನೀ ಪ್ರಕಾರದಿ ನುಡಿದನೂ ‖೧‖

ಕಾಫಿ—ಅಷ್ಟತಾಳ

ಮತಿವಂತ ಸಚಿವ ಕೇಳಯ್ಯಾ। ಗುಣ-ಯುತನೆ ನಾನಾಡುವ ನುಡಿಯಾ। ಹಿತದಿಂದ ಪಾಲಿಪೆಧರೆಯಾ। ಲೋಕ-ಕತಿಶಯವಾಗೆ ಸೌಕರಿಯಾ ‖ ೧ ‖ ಬಡತನವಿಲ್ಲ ರಾಜ್ಯದಲೀ। ನೃಪ-ಗಡಣವತ್ತರಿದೆನಾಜಿಯಲೀ। ಪೊಡವೀಯೊಳ್ವೀರನೆನ್ನಿಸಿವೇ। ಕಪ್ಪ-ಕೊಡುವರು ಭೂಪಾಲರಿರದೇ ‖ ೨ ‖ ಆಳಿದೆ ಬಹುಕಾಲ ಧರೆಯನಾ। ಇಷ್ಟು-ಪೇಳುವೇನ್ಯಾರಿಗೀ ವ್ಯಥೆಯನಾ। ಹಾಳಾಯಿತ ಕಟ ಸಂಪದವೂ। ಸುತ-ರೇಳಿಗೆತನಗಿಲ್ಲ ನಿಜವೂ ‖ ೩ ‖ ‖ ೧೮ ‖

ವಾರ್ಧಿಕ

ಕರಗಳಿಲ್ಲದ ನರನು ಕರೆಹ ಮಿಲ್ಲದ ಗೋವು। ಶರಜವಿಲ್ಲದ ಕೊಳವು ನಾರಿಯಿಲ್ಲದ ಗೃಹವು। ತರಳರಿಲ್ಲದ ಸಿರಿಯು ಚಂದ್ರನಿಲ್ಲದ ನಿಶಿಯು ಭೂಪನಿಲ್ಲದ ರಾಜ್ಯವೂ‖ ಗುರುವಿಲ್ಲದಿಹ ಮಠವು ಹಿರಿಯರಿಲ್ಲದ ಸಭೆಯು। ಹರಿಯ ನೆನೆಯದ ಮನವು ಹುರುಳಿಲ್ಲದಿಹ ನುಡಿಯು। ಪರಿಕಿಸಲು ಪೆಣನ ಸಿಂಗರಿಸಿದಂದಮೊಳೆಂದು ಮೇಧಾವಿ ಚಿಂತಿಸಿದನು ‖ ೧ ‖

ಕಲ್ಯಾಣಿ—ಝಂಫೆ

ಅರಸ ಚಿಂತಿಪೆಯಾಕೆ। ತರಹರಿಸಧಿರು ಮನದಿ। ಹರಿಯ ಕಾರುಣ್ಯದಲಿ। ತರಳ ನುದಿಸುವನೂ ‖ ಭರವಸವಿದೆಂದು ಸಚಿ। ವರ ಶಿರೋಮಣಿ ನುಡಿಯೆ। ನರನಾಥ ಸಂತಸದೊ। ಳಿರುತಿರ್ದ ಸುಖದೀ ‖ ೧ ‖ ಒಂದು ದಿನ ಭೂಪಾಲ। ನಿಂದುವದನೆಯ ನೆರೆಯೆ। ಚಂದದಿಂ ಗರ್ಭವನು। ಚಂದ್ರಮುಖಿ ಧರಿಸೇ ‖ ಮಂದಗಾಮಿನಿ ಬಸುರ। ಹೊಂದಿರುವ ಪರಿಯರಿತು। ಚಂದ್ರನೇಳಿಗೆಯಿಂದ। ಸಿಂಧು ನಲಿವಂತೇ ‖ ೨ ‖ ಮೇಧಾವಿ ನಲಿನಲಿದು। ಕಾದಲೆಗೆ ಸೀಮಂತ। ಮೋದದಿಂದಲಿ ರಚಿಸಿ। ಮಾಧವನ ಪೊಗಳೀ ‖ ಸಾಧು

ಗಳಿಗಿಷ್ಟಾರ್ಥ | ವಾದ ವಸ್ತುಗಳಿತ್ತು| ಮೇದಿನಿಯ ತಣಿಸಿದನು| ಸಾವರದೊಳ ವನೂ || ೩ ||

ಭಾಮಿನಿ

ಅರಸಕೇಳಾ ಬಳಿಕ ಕೇರಳ | ಧರಣಿಪಾಲಕನರಸಿಪೆತ್ತಳು| ಮೆರವ ದಿನ ದಲಿ ತರಳನೋರ್ವನ ಭುವನಸುಂದರನಾ|| ದೊರೆಯು ಬಳಿಗೈತಂದು ದೂತರು| ವೊರೆಯುಲೀವಾರ್ತೆಯನು ಭೂದವ | ಚರರಮನ್ನಿಸಿ ಬುಧರ ತಣಿಸಿದ ನಿತ್ತು ದಾನಗಳಾ || ೧ ||

ತೋಡಿ—ರೂಪಕ

ಜನಪಾಲನಾನಂದಲಹರಿಯೊಳೋಲಾಡಿ | ಪನ್ನೊಂದನೆಯ ದಿನದಲ್ಲೀ || ವಿನುತಪುರೋಹಿತರನ್ನಾಗ ಕರೆಸುತ್ತ | ಘನಪುಣ್ಯಾಹಂ ಮಾಡಿಸಿದನೂ || ೧ || ನೆರೆದಬ್ರಾಹ್ಮಣರಿಂಗೆ ಭೂರಿವಿತ್ತಗಳನ್ನು | ಧರಣೀ ಪಾಲಕನಿತ್ತು ಸುತಗೇ || ಭರದಿಂದ ಪೆಸರತಾನಿಡುವೆನೆಂದಿರಲಾಗ | ಜನಪಾಕೇಳಿದನೊಂದುನಿನದಾ || ೨ ||

ಭಾಮಿನಿ

ಮೂಲನಕ್ಷತ್ರದಲಿ ಪುಟ್ಟಿದ | ಬಾಲತಾನಿವನಾದಕಾರಣ | ಭೂಲಲಾ ಮನೆಪೆಸರನೀನಿಡಬೇಡ ತರಳನಿಗೇ || ತಾಳಲಾರದ ಕಷ್ಟಗಳುನೀ | ನಾಳುತಿಹ ರಾಜ್ಯಕ್ಕೆ ಬಹುದೆನೆ | ಲೋಲಮತಿವಿಪ್ರರನು ಕಳುಹಿ ಚಿಂತೆಯೊಳಗಿರ್ದಾ ||

ಸೌರಾಷ್ಟ್ರ ತ್ರಿವುಡೆ

ಇತ್ತಲವನಿಪನೀಪರಿಯೊಳಿರ | ಲತ್ತಕಾಶ್ಮೀರದೊಳು ಭೂಪಕು| ಲೋತ್ತ ಮನು ಚಂದ್ರಾಂಗನೆಂಬವ | ಮತ್ತನಾಗೀ || ೧ || ಕರೆದುಸಚಿವನೊಳೊರೆದ ನಮ್ಮನು | ಭವರದೊಳು ಹಿಂದಿಕ್ಕಿ ಸೋಲಿಸಿ | ಮೆರೆವನಾಮೇಧಾವಿಭೂವರ | ನರರೆಚೋದ್ಯಾ || ೨ || ತೆರಳಿಧುರದೊಳಗವನ ಜಯಿಸುತ | ಬರುವುದೆಂದತಿ ಬಲವಕೂಡಿಸಿ | ಪರಿಪರಿಯ ವಾದ್ಯಗಳರಭಸದಿ ಪೊರಟನಾಗಾ || ೩ || ಬರ ಬರಲು ಕೇರಳದ ತಿರೆಯನು | ಭರದಿ ಸೇರುತ ಚಾರನೋರ್ವನ | ಕರೆದುಕಳು ಹಿದ ವಹಿಲದಿಂನೃಪ | ವರನಬಳಿಗೇ || ೪ ||

ಕಂದ

ಬಂದತಿನಲವಿಂ ನರವರ | ಗೊಂದಿಸಿಕರಗಳ ಮುಗಿಯುತೆ ಭಕ್ತಿ

ಯೊಳಂ | ಚಂದದಿ ಬಂದಿಹವಾರ್ತೆಯ | ನೊಂದುಳಿಯದ ತೆರದೊಳಗು ಸುರಿದನೀತೆರದಿಂ ‖ ೧ ‖

ನುಂಖಾರಿ — ಆದಿತಾಳ

ಕೇಳೂರಾಜೇಂದ್ರನೀನೂ ನಾನೆಂಬುವನ್ನು-ಕೇಳೂ ರಾಜೇಂದ್ರ ನೀನೂ ‖ ಪಲ್ಲ ‖ ಧರಣೀಪಚಂದ್ರಾಂಗನಿಂದೂ | ಆಹವಕೆಂದು-ನೆರವೀಸಹಿತಲೆ ತಾನು ಬಂದೂ | ಪುರದುದ್ಯಾನದ ನೆರೆಯೊಳಗಿಹಬಹು | ತೆರದಿಂಕಪ್ಪವ ನುಡಿಪದ ಕೇಯುತ | ನಿರತವೀಧರೆಯೊಳ | ಗಿರಬೇಕೆಂಬುದ | ನರುಹಲು ಬಂದೆನಾ | ದೊರೆಯೆ ಪರಾಕು ‖ ಕೇಳೂರಾಜೇಂದ್ರ ‖ ೧ ‖

ಭಾಮಿನಿ

ಚರರ ನುಡಿಯನು ಕೇಳಿ ಪ್ರಳಯದ | ಹರನತೆರದಿಂ ಭೂಪ ಘರ್ಜಿಸು ತರರೆಸರಿಭನ ಮರೆಯಿತೇ ಮೂಢಾತ್ಮಗೆಂದೆನುತಾ ‖ ಒರೆದನೆಲವೋಕೇಳು ಬವರದಿ | ತೆರುವೆಕಪ್ಪವನೆನುತಕಳುಹಿಸಿ | ಭರದಿಸಚಿವನಕರೆದು ಧರಣಿಪ ನೊರೆದಮನದಿರವಾ ‖ ೧ ‖

ಕೇತಾರಗೌಳ — ಝಂಪೆ

ಗುಣಮಣಿಯೆ ಮಂತ್ರಿವರ್ಯಾ | ಮಾನಸದೊ-ಳೆಣಿಸಿರ್ಪೆನೊಂದು ಕಾರ್ಯಾ | ಗಣಿಸದೆಮ್ಮನುಹಮ್ಮಿಲೀ | ಚಂದ್ರಾಂಗರಣಕೆಬಂದನು ಮುದದಲೀ ‖೧‖ಸಿರಿಯಸೊಕ್ಕಿಂದೇರುತಾ | ಬವರಕುರೆ-ಕರೆದಿರ್ಪನೀಗಧೂರ್ತಾ| ಪರಿಭವವ ನೆಲ್ಲ ಮರೆತೂ | ಬಂದಿರ್ಪು-ದರರೆ ಬಲುಲೇಸಾಯಿತೂ ‖ ೨ ‖ ಬಡಜನಪನಂತೆ ಬಗೆದಾ | ಕಪ್ಪವನು-ಕೊಡಲುಬೇಕೆಂದು ನುಡಿದಾ‖ ಧಡಿಗ ತನವನು ನಿಲ್ಲಿಸೀ ಪಿಂದಕಾ-ಪೊಡವಿಪನತಾನೋಡಿಸೀ ‖ ೩ ‖ ಪಡೆವೆ ಸತ್ಕೀರ್ತಿಯನ್ನೂ | ರಣ ಕಾಗಿ-ನ್ನೃಡನೆಬಂದರು ಗೆಲುವೆನೂ ‖ ಒಡೆಯ ಶ್ರೀಹರಿ ಕಾವನೂ| ನಮ್ಮನೆಂ-ದಡಿಗಡಿಗೆ ಭೋರ್ಗರೆವನೂ ‖ ೪ ‖ ಅದರಿಂದಬವರಕೀಗಾ | ಸೇನೆಯನು ನೆರಹಿಸೆಲೆ ಮಂತ್ರಿ ಬೇಗಾ | ಮುದದಿರಿಪುಗಳಸದೆಯುವೇ | ಮಮಶೌರ್ಯ-ಮುದಮುಖನಿಗುರೆ ತೋರುವೇ ‖ ೫ ‖

ವಾರ್ಧಿಕ

ಧರಣಿಪತಿಲಾಲಿಸಿಂತೊರೆಯಲಾ ಮಂತ್ರೀಶ | ನಿರವೆ ಸನ್ನಾಹಮುಂರಚಿ ಸುತರೆಬಳಿಕಿತ್ತ|ಚರರುನಡೆತಂದು ಕಾಶ್ಮೀರ ಪುರದರಸಂಗೆ ಯೆರಗಿ ಕೈಮುಗಿದು

ನಿಂಪೂ ॥ ಘುರವನಿಕ್ಷೈಸಿಹನು ಕೇರಳಾಧಿಪನೆಂದು । ಪರುವವೃತ್ತಾಂತ ವಂಬಿನ್ನೈಸರೋಷದೊಳ । ಗರುವತ್ತು ಲಕ್ಷವಮಾರ್ಬಲದೊಡನೆ ಮುಂದರಿಯೆ ಮೇಧಾವಿತಡೆದೆಂದನೂ ॥ ೧ ॥

ಪಂಚಾಗತಿ—ವಟ್ಟೆ

ಅರಿಬಲೌಘವನ್ನು ಸವರಿ ಬರುತ ಮುಂದಕೇ । ಧರಣಿಪಾಲ ಮುದದಿ ನುಡಿದ ತೆರಳು ಹಿಂದಕೇ ॥ ಘುರದೊಳೆನ್ನ ಗೆಲುವೆಯೆಂದು ಬಗೆದೆಯಾಭಲಾ । ಸುರಪ ಮುಖ್ಯರೆನ್ನ ಸಮರಕಂಜುತಿಹರೆಲಾ ॥೧॥ ಮಂದಮತಿಯೆ ಕೇಳುಹಿಂದೆ ತನ್ನಬಲವನೂ । ಕೊಂದು ಜಯವ ಹೊಂದಿದವುದಾಂಧ ನಿನ್ನನೂ ॥ ಇಂದು ಧರನುಬಂಪು ಕಾಯೆ ತರಿಯದುಳಿವೆನೇ । ಹಂದೆನೃಪರಗೆಲಿವ ಶೌರ್ಯ । ದಂದ ವರಿಯೆನೇ ॥ ೨ ॥ ಹುಡುಗ ಬುದ್ಧಿಯೆಡವಿಬೀಳ್ವೆತಡೆಯದೀಗಳೇ । ನಡೆಯೊ ಪುರಕೆ ಧಡಿಗ ತನದ ಕಡುಹ ತೊರೆಯೆಲೇ ॥ ಕೊಡುತಕಷ್ಟ ಪೊಡವಿಯೊಳಗೆ ಬಾಳು ಮುದದಲೀ । ಜಡಜನಾಭನಾಣೆ ದೃಢದಿ ಕಾವೆ ದಿಟದಲೀ ॥ ೩ ॥

ಮಾರವಿ—ಏಕತಾಳ

ತೆರುವೆನು ಕಪ್ಪವ । ಘುರದೊಳಗೆನುತಲಿ । ಸುರಿದನು ಕಣೆಗಳನೂ ॥ ಸುರರಚ್ಚರಿಯೊಳ। ಗಿರುತಿರೆ ತರಿದನು। ಕೆರಳುತ ಭೂವರನೂ ॥ ೧ ॥ ಫಡಫಡ ಭೂಪನೆ । ನಿನ್ನಯ ವಿಕ್ರಮ । ಜಡಧಿಯಪೀರುವರೇ । ಬಡಬಾನಳತಾ । ನರಿತುಕೊಮನದಲಿ । ಕೆಡದಿರು ನುಡಿದೆಖರೇ ॥ ೨ ॥ ನಿಲ್ಲೆಲೊ ಬಾಲಕ । ಬಲ್ಲೆನು ವಿಕ್ರಮ । ಸೊಲ್ಲಿಸದಿರು ನಿನ್ನಾ॥ಮುಲ್ಲತನದಬಲು । ಝಲ್ಲಿಗಳರಿತಿಹೆ । ಕೊಲ್ಲುವೆ ತಿಳಿ ಜತನಾ ॥ ೩ ॥ ಳಙ

ಭಾಮಿನಿ

ಭೂಲಲಾಮನನುಡಿಯ ಕೇಳ್ದಾ। ಕಾಲಭೈರವನಂತೆ ಖತಿಯನು। ತಾಳು ತುಗ್ರಮಹೋಗ್ರಶಕ್ತಿಯ ನೆತ್ತಿಬೊಬ್ಬಿಡುತಾ॥ಕಾಲಹರನನು ನೆನೆಯು ತೆಚ್ಚೊಡೆ ಶ್ರೀಲಲಾಮನ ಭಜಕನಳಿದನು । ಪೇಳಲೇನಾವಿಧಿಯವಿನಾರುವರುಂಟೆ ಲೋಕದಲೀ ॥ ೧ ॥

ಆರ್ಯ—ಸವಾಯಿ

ಕಡುಗಲಿ ಭೂವರ । ರೊಡೆಯನು ಬವರದಿ । ನುಡಿವಿಹಸಂಗತಿಯನು ತಿಳಿದೂ ॥ ತಡೆಯದೆ ಜನಪನ। ಮಡದಿಯು ಕೊರಗುತ। ನಡೆದಳು ಮುಂದಕೆ

ದುಗುಡದೊಳೂ ॥ ೧ ॥ ಹರಿಹರಿ ಯೆನ್ನುತ । ಮರುಗುತಮನದೊಳು ತರುಣಿ ಯಳಾಗತಿಶೋಕದೊಳೂ ॥ ಕರಕರಿಸುತಲೆಮುಂ । ದರಿಯುತಬಂದಾ । ತಿರೆ ಯಾಣ್ಮನನೆರೆನೋಡಿದಳೂ ॥ ೨ ॥

ಆನಂದ ಭೈರವಿ—ಏಕತಾಳ

ಹರಾಹರಾ ಮತ್ಪ್ರಾಣಕಾಂತಾ । ತರಳನಾನೆನ್ನನ್ನು ಸಹಿತ ಮರವೆಯಿ: ವೇಹಾ-ತೊರೆದೆಯೋ ॥ ೧ ॥ ಎಂದಿಗಾನು ಕಾಂಬೆನಿನ್ನಾ । ಸುಂದರಸುವದ ನವನ್ನಾ । ಕಾಂತನೇ-ಸುಗುಣವಂತನೇ ॥ ೨ ॥ ಹುಲುನರೇಶನಿನ್ನನಿಂ । ಕೊಲುವುದೆಂಬುದತಿವಿಚಿತ್ರ । ದಾತನೇ । ಲೋಕಾ-ಪ್ರೀತನೇ ॥ ೩ ॥

ಭಾಮಿನಿ

ಹಲವು ಪರಿಯಲಿ ಚಿತ್ರಲೋಚನೆ । ಯಳಲಿದಳು ಹಾಕಾಂತತೊರೆದೆಯ ಬಳಲಿದೆಯಪಿರಿದಾಗಿ ರಣದೊಳಗಕಟ ಹಾವಿಧಿಯೇ ॥ ಕಲಹದಲಿ ನೀನಳಿದ ಮೇಲಾ । ನುಳಿಯುವೆನೆ ತವಸುತನಭಾಗ್ಯದ ಬೆಳವಳಿಗೆ ಹಾಳಾಯಿತಕಟಕ ಟೆನುತಹೊರಳಿದಳೂ ॥ ೧ ॥ ॥ ೫೨ ॥

ಕಾಂಬೋಧಿ—ಝಂಪೆ

ಎಂದಾಗನೋಯುತ್ತಮನದಿ ಭೂಪನ ಪಾದ। ದ್ವಂದ್ವವನು ನೆನೆದು ವನ ಜಾಕ್ಷಿ ॥ ಮುಂದರಿದು ಶ್ರೀ ಹರಿಯನಂದು ನೆನೆಯುತ ಚಿತೆಯ । ಸಂಪದಿಂ ರಚಿಸಿ ಧೈರ್ಯವಲೀ ॥ ೧ ॥ ನಂದಜಾತನೆ ಸಲಹು । ಕಂದನನು ಕರುಣೆಯಲಿ । ಮುಂದಿನ್ನು ಜನ್ಮ ಜನ್ಮದಲೀ ॥ ಹೊಂದಿಸೈಮಮಪತಿಯ । ಚರಣಸೇವೆಯ ನೆಂದು । ಇಂದುಮುಖಿ ಚಿತೆಗೆಬಲಬಂದಾ ॥೨॥ ಹಾರಲಂಬರದಿಂದ । ವೀರ ಸತಿಗತಿಮೆಚ್ಚಿ । ಸಾರಸದಸುಮದ ಮಳೆಯನ್ನೂ ॥ ಧೀರಸುರರುರೆಸುರಿಸೆದೂತಿ ಯೋರ್ವಳುತಿಳಿದು । ವಾರತೆಗಳೆಲ್ಲವನುಜವದೀ ॥ ೩ ॥ ಚಿಂತೆಯನು ತಾಳಿ ಮನಕರಗಿ ತರಳನನೋಡಿ । ಯೆಂತಾದಡೀ ಶಿಶುವುಮುಂದೇ । ಕಂತುಪಿತ ದಯದಿಬಲವಂತನಾಗುವನೆಂದು । ದಂತಿ ಗಾಮಿನಿ ತಿಳಿಯುತಂದೇ ॥ ೪ ॥ ತರಳನನು ಕರೆದೊಯ್ಯಲಿತ್ತಮೊರೆ ಚಂದ್ರಾಂಗ । ಧುರದಿಸರ್ವರಗೆಲ್ದು ಧರೆಯನಾ । ನಿರದೆ ಪಾಲಿಸಿ ತೋಷಗೊಂಡು ಕೇರಳ ಪುರದಿ । ಮೆರೆದಿರ್ದ ಪರಿ ಯನಿವನರಿಯನಾ ॥ ೫ ॥

ಕೇತಾರಗೌಳ—ಅಷ್ಟತಾಳ

ಮಂದಗಾಮಿನಿ ಭೂಪ । ನಂದನಸಹಿತಲೆ। ಹೊಂದಿವ ಮಗುಡಮೊಳೂ॥ ಮಂದರ ಗಿರಿಧರ ಪೊರೆಯುಬೆ,ಕೆನ್ನುತ ಬಂದಳು ಕುಂತಳಕೇ ॥ ೧ ॥ ನಿಳೆಯು ವೊಂದನು ವಾಡುತೊಡಗೂಡಿ ಕುವರನ । ನಳಿನಾಕ್ಷಿ ದಿನದಿನದೀ॥ ಪೊಳಲನೆ ಲ್ಲವಸುತ್ತಿ ಕಷ್ಟಧಿಂದಾರ್ಜಿಸಿ।ಸಲಹಲು ಬಾಲಕನಾ॥೨॥ ಕಂದನ ಮೊಗನೋಡಿ ಚಂದದಿಂದಾಡಿಸಿ । ಹೊಂದುತ್ತ ತೋಷವನೂ ॥ ಚಂದಿರವದನೆ ತಾನಿಂತಿರೆ ಕೆಲದಿನ । ಸಂದಳು ಸುರಪುರಕೇ ॥ ೩ ॥

ವಾರ್ಧಿಕ

ಹರಿಣಾಂಕ ಕುಲಜಕ್ಕೇಳೀ ಪರಿಯೊಳಾ ಬಾಲ । ರರಸಂಗೆ ಗತಿಯಿಲ್ಲದಾಗಲಾ ಪುರಜನರು । ಕರುಣದಿಂ ರಕ್ಷಿಸುತಲಿರಲವನ ಪುಣ್ಯದಲಿ ರಮಣೀಯು ಶಿಲೆದೊರಕಲೂ ॥ ಹರಿಯ ಕಾರುಣ್ಯದಲಿ ತರಳನದತಾನಿರಿಸಿ। ಹರುಷದಿಂದಿರುತಿರಲು ಹರಿಯ ನೆನೆಯುವ ಬುದ್ಧಿ । ಮೆರೆವ ಸಾಲಿಗ್ರಾಮದತಿಶಯವ ಮಹಿಮೆಯಿಂದೊರಕೊಂಡುದಾ ತರಳಗೇ ॥ ೧ ॥

ಕಾಂಬೋಧಿ—ಝಂಪೆ

ಚಿತ್ತವಿಸು ಭೂಪಾಲ । ಯಿತ್ತ ಕುಂತಳ ಪುರದ। ಮಾತ್ಯನಾಗಿಹ ದುಷ್ಟಬುದ್ಧೀ ॥ ಮತ್ತನಾಗುತ ಮುದದಿ । ಚಿತ್ತದಾನಂದದೊಳ । ಗಿತ್ತನೋಲಗವೊಂದುದಿನದೀ ॥ ೧ ॥ ಧರಣಿಪಾಲಕನಂಥ । ನಿರುವ ಕಾರಣದಿಂದ। ತಿರೆಯುನು ರೆಪಾಲಿಸುವನೀತಾ ॥ ಪರಿವಾರ ಪುರಜನರು । ನೆರೆದಿರುವ ಸಮಯದೊಳ । ಗರುಹಿದನು ತಾನೊಂದು ಮಾತಾ ॥ ೨ ॥ ರಣವಿಚಾರವನರಿತ । ಗುಣಿಗಳ್ನೀಸ್ನಿರತ । ಬಣಗು ಭೂಭುಜರನ್ನು ರಣದೀ ॥ ಮಣಿಸಿ ಘನತೆಯ ಪಡೆದು । ಯೆಣಿಸಲಸದಳವಾದ । ಮಣಿರತ್ನಗಳಪಡೆದಿರ್ಪೆಸೇ ॥ ೩ ॥

ಭಾಮಿನಿ

ಎನುತಲಾ ಮಂತ್ರೀಶವಿಭವದೊ। ಳನಿಬರನುಕೊಂಡಾಡಿ ಮರುದಿನ । ವಿನುತಭೂಸುರರಿಂಗೆ ಭೋಜನವಿತ್ತು ಸತ್ಕರಿಸೀ ॥ ಘನತೆಯುಲಿ ಕುಳ್ಳಿರಿಸೆ ವಿಪ್ರರು । ಚಿನುಮಯನ ನೆನೆಯುತ್ತಲಣುಗರ । ಮನವಣಿಯೆ ಮುದ್ದಿಸುತಲಾಡುವ ಬಾಲನನುನೋಡೀ ॥ ೧ ॥

ತಾಳ—ಝಂಪೆ

ತರಳವರನನು ನೋಡುತಾ । ಭೂಸುರರು ಭರಿತಸಂತಸ ತಾಳುತಾ॥ ದುರುಳ ಮತಿಯೊಳು ಕೇಳ್ದರೂ । ಹರುಷದಿಂ—ಹರಸುತವನನು ವಿಪ್ರರೂ ॥ ೧ ॥ ಯಾರ ಮಗನೀ ಬಾಲನೂ । ಯಿವನವಿ-ಚಾರಗಳ ಪೇಳು ನೀನೂ ॥ ಭೂರಿ ಲಕ್ಷಣವಂತನೂ । ಯೆಂದೆನಲು—ಕ್ರೂರಿಯವರೊಡನೆಂದನೂ ॥ ೨ ॥ ತಿರೆಯ ಭಾರಕೆ ಪುಟ್ಟಿದಾ । ತಿರುಗಾಡಿ—ತರಳರೊಡನಿವಸೇರಿದಾ ॥ ಧರಣಿ ಸುರರೇತಕಿವನಾ । ಕೇಳಿದಿರಿ—ಹರುಷದಿಂ ಪೇಳಿರದನಾ ॥ ೩ ॥ ಅತಿಶಯದ ಬಾಲನಿವನೂ । ದೂರದಿರು—ಗತಿಹೀನನೆಂದಿವನನೂ ॥ ಮತಿವಂತ ಕೇಳು ನೀನೂ । ನಿನಗಾವು—ಹಿತದಿ ಪೇಳುವ ಮಾತನೂ ॥ ೪ ॥

ಬೇಗಡೆ—ಏಕತಾಳ

ಲಾಲಿಸೆಲೆ ಗುಣ । ಶೀಲ ಸಚಿವೇಂದ್ರಾ । ನಿನ್ನೊಡನೆ ಪೇಳುವ—ಬಾಲ ಕನ ವೃ । ಶಾಲ್ಯವನು ಸಾಂದ್ರಾ ॥ ಶೀಲಳದಿಯ । ಬಾಲ ಶ್ರೀಹರಿ । ಲೋಲನ ಯನ ವಿ । ಶಾಲ ಸದ್ಗುಣ । ಮಾಲ ಭಜಕರ । ಪಾಲನನುದಿನ । ಪಾಲಿಸು ವಸು । ಶೀಲ ಬಾಲನ ॥ ಲಾಲಿಸೆಲೆ ॥ ೧ ॥ ದುಷ್ಟ ಭೂಪರ । ಮೆಟ್ಟುತಾಜಿ ಯಲೀ । ಜಯ ಯುವತಿಯಳ ಕೈ—ಕಟ್ಟಿ ತನ್ನೊಶ । ವಿಟ್ಟು ಮೋದದಲೀ ॥ ಕಟ್ಟ ಕಡೆಗೀ ಪಟ್ಟವೇರುತ । ಸೃಷ್ಟಿ ಮೂರರ । ನೊಟ್ಟುಗೂಡಿಸಿ । ದಿಟ್ಟಸಾ ಗಿಯೆ । ಶಿಷ್ಟವರ್ಧನ । ನಿಷ್ಟದೊಳು ಜಗ । ಜಟ್ಟಿಯಾಗುವ ॥ಲಾಲಿಸೆಲೆ॥೨॥ ಕಂದನಂದದಿ । ಮುಂಪೆ ಸೆಲಹೆಂಡೂ । ಭೂಸುರರೊರೆಯೆ ಮನ—ನೊಂದು ದುಗುಡವ ಹೊಂದುತವನಂದೂ ॥ ಚಂದದಿಂದವ । ರೆಂದ ಮಾತಿಗೆ । ಮಂದ ಹಾಸವ । ಹೊಂದಿದನ ತೆರ । ದಿಂದ ತೋರಿಸು । ತಂದು ಕಳುಹುತ । ಮುಂದಿ ರಕೆತಾ । ಬಂದು ನೆನೆದನೂ ॥ ಲಾಲಿಸೆಲೆ ॥ ೩ ॥

ಕಾಂಬೋಧಿ—ಝಂಪೆ

ಧರಣಿಸುರರೊರೆದ ಮಾತನು ಕೇಳಲೆನ್ನೆದೆಯು । ಧರಧರನೆ ನಡುಗುವು ದಿದೇನೂ ॥ ತರಳನಿವನೈತಂದು ಕೆಡಿಸಿದನು ಕಾರಿಯವ । ನೊರೆಯಲಾರಿಗೆ ಕಷ್ಟಗಳನೂ ॥ ೧ ॥ ಕಂದರಿಗೆ ಈ ರಾಜ್ಯ । ಹೊಂದಬಹುದೆಂದು ತಿಳಿ । ದೊಂ ದೆ ಮನದೊಳಗಿರ್ದೆ ಸುಖದೀ ॥ ಇಂದಿಗೀಪರಿಯಾಯ್ತು ಗತಿಹೀನ ಕುವರನಾ । ನಂದದಿಂದಾಳುವನೆ ಧರೆಯಾ ॥ ೨ ॥ ಮುಂದುವರಿಯಿತು ಕಾರ್ಯ । ಮಾಡ

ಲೇನಕಟಿನ್ನು । ಕೊಂದಲ್ಲದಿರೆನು ವೈರಿಯುನೂ । ಕುಂದುತನಗದರಿಂದ । ಲವ ಮಾತ್ರವಿಲ್ಲ ವೆಂ । ದಂದುಕಟುಕರಕರೆದು ನುಡಿದಾ ॥ ೩ ॥

ವಾರ್ಧಿಕ

ನುಡಿದನೆಲೆಕಟುಕರಿರ ಬಾಲನೋರ್ವನು ನಮಗೆ। ಕಡುಕಷ್ಟವಂ ಕೊಡುವನದರಿಂದಲವನತಲೆ । ಕಡಿದು ಕಾನನದೊಳಗೆ ಬಿಸುಟುಬನ್ನಿರಿ ಜವದೊಳೆಂದೊರೆಯಲಾನಂದದೀ ॥ ಜಡಜನಾಭನ ಭಕ್ತನನ್ನೆತ್ತಿಕೊಂಡೊಯ್ಯ । ಲಡವಿನಡುವಿಲಿ ತರಳ ಹರಿಯನುರೆ ಜಪಿಸುತಿರೆ । ದಡಿಗರೆದೆಕದಡಲಡಿಗಡಿಗವರು ದುಷ್ಟಬುದ್ಧಿಯ ಜರೆದು ಕಡು ನೊಂದರೂ ॥ ೧ ॥ ॥೭೬॥

ಸೌರಾಷ್ಟ—ತ್ರಿವುಡೆ

ಏನು ಚೋದ್ಯವಿದಮು ತರಳನ । ಕಾನನದಿ ಕೊಲುವಂತೆ ಸುಮತಿಯು । ಸಾನುರಾಗದಿ ಪೇಳಿದನು ಮತಿ । ಹೀನನಾಗೀ ॥ ೧ ॥ ಆರಿಹರು ಭೂತಳದೊಳೀಪರಿ। ಕ್ರೂರಕರ್ಮವ ಮಾಡುವವರು ವಿ । ಚಾರಿಸಿದೊಡೀತನನು ಕೊಲೆಮನ । ವಾರಿಗಹುದೂ ॥ ೨ ॥ ಹರಹರಾ ಬಾಲಕನ ವಧಿಸದೆ । ಭರಿತ ಪಾತಕಕಂಜಿನಿಳೆಯಕೆ । ಮರಳಿದೊಡೆ ಮಂತ್ರೀಶನೆಮ್ಮನು । ತರಿಯದುಳಿಯಾ ॥ ೩ ॥ ಏನ ಮಾಡುವದಿನ್ನು ಮುಂದಿ । ನ್ನೇನು ಗತಿ ತಮಗೆಂದು ಕಟುಕರು । ದಾನವಾರಿಯ ಭಜಕನನು ನಿ । ಧಾನದಿಂದಾ ॥ ೪ ॥ ನೋಡಿ ತಮ್ಮನು ತಾವೆಹಳಿದುರೆ । ರೂಢಿಪನ ಸಚಿವನನು ಶಪಿಸುತ । ಮೂಢರಂದದಿ ಕಾಡೊಳಿರ್ದರಿ । ನ್ನಾಡಲೇನಾ ॥ ೫ ॥

ವಾರ್ಧಿಕ

ಪರಿಕಿಸುತಲಿರಲೆಡದ ಕಾಲೊಳಾ ಬಾಲಕಗೆ ಮೆರೆಯುತಿರೆ ಷಷ್ಠಾಂಗುಲೀಯುಗಳು ನೆರೆನೋಡಿ।ಧರಿಸಿರುವ ಕರವಾಳದಿಂದಾರನೆಯ ಬೆರಳ ಕತ್ತರಿಸಿ ಕುರುಪು ಸಹಿತಾ ॥ ಪುರಕೆ ಬಂದಾ ಮಂತ್ರಿಯೊಡನೆ ತರಳನನು ಸಂಹರಿಸಿದೆವು ತಾವೆಂದು ಬಹುಮಾನಗಳ ಪಡೆದು ಮೆರೆಯುತಿರಲತ್ತಕಾನನದೊಳಗೆ ಶಿಶುವತ್ತು ಸಂಕಟಂಗೊಳುತಿರ್ದುದೂ ॥ ೧ ॥

ಮೆಂಚ್ಚುಗೌಳ—ಅಷ್ಟತಾಳ

ಧರಣಿಪ ಲಾಲಿಸಿನ್ನುಸುರವೆ ನಿನಗಿತ್ತ । ದೊರೆ ಕುಳಿಂದಕನೆನ್ನು ವಾ ॥ ಭರಿತ ವಿಕ್ರಮಿ ಬೇಡರೊಡೆಯ ಚಂದನಪುರ । ವಿರದಾಳ್ವ ಮತಿವಂತನೂ ॥

ಮೆರೆಯುತ್ತಲಿಹನೂ ॥ ೧ ॥ ಕರೆದು ಬೇಡರ ಪಡೆ । ಗಿರದೆ ನೇಮುವನಿತ್ತು । ಸರವೇಯ ನಾಡ । ಲೆಂದೂ । ತರ ತರದಿಂ ಶಸ್ತ್ರನಿಕರವ ಧರಿಸುತ್ತ । ತೆರಳಿ ದರ್ಪಥವಿಡಿದೂ । ಹರುಷದಿಂ ಮುಂದರಿದೂ ॥ ೨ ॥

ಪರಾಜು—ಏಕತಾಳ

ಬೇಟೆಯಾಡುತ್ತ ಬಂದನಾಗಾ । ಪುಳಿಂದರ ಭೂಪ—ಬೇಟೆಯಾಡುತ್ತ ಬಂದನಾಗಾ ॥ ಪಲ್ಲವಿ ॥ ಕೋಟಿ ಕಿರಾತರ । ಲೂಟಿಯೊಳಾ ಮೃಗ । ಕೂಟವ ಕೆಡಹುತ । ಬೂಟಕ ತನದಲಿ ॥ ಬೇಟೆ ॥ ೧ ॥ ಬೊಬ್ಬೆಯ ಗೈಯುತ । ಲೆಬ್ಬಿಸುತೀಪರಿ । ಕೊಬ್ಬಿದ ಮಿಗಖಗ । ಸಬ್ಬವ ತರಿದನೂ ॥ ಬೇಟೆ ॥ ೨ ॥ ನೆರವಿಗೆ ಸಿಲುಕದೆ । ಭರದಿಂದೋಡಿದ । ಹರಿಣಿಯ ಕಂಡದ । ಸಿರದೆ ಬೆನ್ನಟ್ಟಿದಾ ॥ ಬೇಟೆ ॥ ೩ ॥

ವಾರ್ಧಿಕ

ಹರಿಣನಂ ಬೆಂಬತ್ತಿ ಬರಲಾ ಕುಳಿಂದಕಂ ಹರಿಯನೇ ಜಪಿಸುತಳುತಿಹ ಬಾಲನಂ ನೋಡಿ ಹರಿಯನಲ್ಲಿಯೆ ನಿಲಿಸಿ, ಹರಿಯನತಿ ಕೊಂಡಾಡಿ ಹರಿಯಿಂದ ಲಿಳಿದು ಬಳಿಕಾ ॥ ಕರುಣದಿಂ ಬಳಿಸಾರಿ ತರಳನನು ತಡವರಿಸಿ, ಸುರಿವ ನೆತ್ತರನೊರಸಿ, ಬಳಿಕ ಸಂತಸವೆರಸಿ, ಕರುಣೆಗಳ ಬಲ್ಲಿದನು ತನ್ನವರ ಮೊಗ ನೋಡಿ, ಮಂದಹಾಸದಿ ನುಡಿದನೂ ॥ ೧ ॥

ಘಂಟಾರವ—ಝಂಪೆ

ಕೇಳಿರೈ ಸುಭಟರಿರ ನಿಮಗೊರವೆ ಮಾತಾ । ಪೇಳಲೇನೆನ್ನ ಪುಣ್ಯೋದಯವನಿನಿತಾ ॥ ಪಲ್ಲ ॥ ತರಳರಿಲ್ಲೆಂದು ನಾ । ಕರಗುತಿರೆ ಮನದೊಳಗೆ । ಪರಮಾತ್ಮ ದಯೆಗೈದ । ಭರಿತ ಗುಣ ಮಣಿಯೂ ॥ ಕೇಳಿರೈ ॥ ೧ ॥ ಹರಿಯ ನೆನೆದೀ ವನದಿ । ಹರುಷದೊಳಗಿಹ ಬಾಲ । ವರನಿವನ ಪರಿಯರಿಯೆ । ನೆರೆ ಚೋದ್ಯ ವೈಸೇ ॥ ಕೇಳಿರೈ ॥ ೨ ॥ ಅರಸುತನೀ ತರಳ । ಮಾರನಂದದೊಳಿಹನು । ಸೂರಿಯನೊ ಚಂದಿರನೋ । ಯಾರೆಂಬುದರಿಯೇ ॥ ಕೇಳಿರೈ ॥ ೩ ॥ ಮುರಹರನ ನೆನೆದಿರುವ । ಪರಿಯಿಂದಲುಳಿದನಿವ । ಕರುಣನಿಧಿ ನಮಗೊಲಿದ । ನೊರೆಯಲೇನಿಹುದೂ ॥ ಕೇಳಿರೈ ॥ ೪ ॥ ಮುಂದಿವನ ಸಂತಸದಿ । ಕಂದನಂದದಿ ಪೊರೆಯುವೆ । ನೆಂದುಸುರಿಶಬರರನು । ಮಂದಿರಕೆ ಕಳುಹೀ ॥ ಕೇಳಿ

ರೈ || ೫ || ತರಳನನ್ನೊಡಗೊಂಡು । ಪುರಕೆ ಮರಳಿದನಾತ || ಹರಿಯ ಕರುಣದ ನೆಲೆಯ । ನರಿಯುವವರಾರು || ಕೇಳಿರೈ || ೬ ||

ಭಾಮಿನಿ

ತರುಣಿಯನು ಕರೆದೆಂದ ನಮ್ಮಯ । ಕೊರತೆಯನು ಪರಮಾತ್ಮ ನೀಗಿದ। ತರಳನನು ನಮಗಿತ್ತ ಕಾರಣ ಹರುಷಮೊದಗಿದುದೂ || ಕರುಣದಲಿ ಕಾಪಾಡು ನೀನೆನು । ತರಸಿಯೊಡನರುಹಲ್ಕೆಹರುಷದ । ಶರಧಿಯೊಳಗೋಲಾಡಿ ಪತಿಯೊಡನೆಂದಳೀ ತೆರದೀ || ೧ ||

ಶಂಕರಾಭರಣ—ಏಕತಾಳ

ವಲ್ಲಭ ನೀನೊರೆದ ಮಾತ | ನೆಲ್ಲಕೇಳಿ ಮನಕೆ ಹರುಷ । ವಲ್ಲದಿನ್ನು ಚಿಂತೆಯಿಹುದೆ । ಪುಲ್ಲನಾಭನಾ || ಸೊಲ್ಲು ಸೊಲ್ಲಿಗಿರದೆ ಹೊಗಳು । ತಿಲ್ಲಿ ನಮ್ಮ ಮುಂದೆ ನಲಿವ । ನಲ್ಲ ಬಾಲನಿವನ ಕಂಡು । ದೆಲ್ಲಿ ತಿಳಿಯೆನೂ || ೧ || ಮಾನಿನೀಸುವದನೆ ಕೇಳು । ಕಾನನಕ್ಕೆ ಬೇಟೆಗಾಗಿ । ಸೇನೆಸಹಿತ ಪೋಗುತೊಂದು ಜಾಣ ಜಿಂಕೆಯಾ || ಕೇಣದಿಂದ ಕೊಲುವೆನೆಂದು । ತಾನೆ ಮುಂದ ಕಟ್ಟುತಿರಲು । ಕಾಣಿಸಿದನು ಹರಿಯು ತನಗೆ । ಸೂನುಯಿವನನೂ || ೨ || ತರಳನಿವನ ವನದೊಳಿರಿಸಿ । ತೆರಳಿ ಪೋಗೆ ಮನವು ಹೇಗೆ । ಹರುಷವಾಯ್ತು ಹಡೆದ ಮಾತೆ । ದುರುಳೆಯಲ್ಲವೇ || ಕರಗಿತೆನ್ನ ಮನವು ಕಾಂತ । ಮೆರೆವ ನೈಸೆ ಸುಗುಣವಂತ । ಹರುಷ ಕೊಡುವ ಮನಕೆ ನಿರತ । ಭರಿತ ಬಾಲಕಾ || ೩ || ಮಡದಿ ಕೇಳು ಪೊಡವಿಯೊಳಗೆ । ಹಡೆದ ಮಾತೆ ತೊರೆಯಲಿವನ । ಪಡೆದ ಕರ್ಮ ಫಲದಿ ಕಷ್ಟ । ನುಡಯಲೇನಿದೇ || ಜಡಜ ಭವನ ನಿಯಮದಂತೆ । ನಡೆಯದಿಹುದೆ ಮೂರು ಲೋಕ । ಕೊಡೆಯ ಹರಿಯು ನಮಗೆ ಕೊಟ್ಟ । ದೃಢದೊಳಿವನನೂ || ೪ || ಮನಕೆ ಹರುಷವಾಯ್ತು ತನಗೆ । ವಿನಯ ಲಾಲಿಸಿನ್ನು ಬಂಜೆ । ಯೆನುವರುಂಟೆ ಲೋಕದೊಳಗೆ । ತನೆಯ ನಿವನಿಗೇ || ಘನತೆಯಿಂದ ಪೆಸರನಿಡಲು । ವಿನುತ ವಿಪ್ರರನ್ನು ಕರೆಯೊ । ಜನರಿಗೀಯೊ ಕಾಮಿತಾರ್ಥಗಳನು ಜವದಲೀ || ೫ ||

ಸುರುಟಿ—ಏಕತಾಳ

ವನಿತೆಯ ನುಡಿ ಕೇಳೀ । ಮನದೊಳು—ಘನ ಹರುಷವ ತಾಳೀ || ಜನರಿಗೆ ಪತ್ತನ । ವನು ಸಿಂಗರಿಸಲು । ವಿನಯದೊಳಪ್ಪಣೆ । ಯನು ಕಾ

ಕೊಟ್ಟನೂ ॥ ೧ ॥ ಧರಣೀ ಸುರರನ್ನೂ । ಕರೆಸಿದ—ವರ ಜೋಯಿಸರನ್ನೂ ॥ ಪರಿಪರಿ ದಾನಗ । ಳಿರದಿತ್ತವರಿಗೆ । ಭರಿತಾನಂದವ । ನುರೆಗೊಳಿಸಿದನೂ ॥ ೨ ॥ ಪತ್ತಣಿಗರಿಗೆಲ್ಲಾ । ಯಿತ್ತುದ—ಚಿತ್ತಜ-ಪಿತ ಬಲ್ಲಾ|ಮತ್ತುರೆ ವಿಪ್ರರ। ಮೊತ್ತವ ನೋಡು ತ । ಬಿತ್ತರಿಸಿದನಾ । ಪೃಥ್ವಿ ಪಾಲಕನೂ ॥ ೩ ॥

ಕೇತಾರಗೌಳ—ಝಂಪೆ

ಲಾಲಿಸಿರಿಮುದದೊಳಾನೂ । ಪೇಳ್ವ ನುಡಿ—ಪಾಲಿಸುತ ಸಂತಸ ವನೂ ॥ ಲೀಲೆಯಿಂದೆನಗೀವುದೂ । ಮಮಸುತನ—ಮೇಲೆ ಕರುಣೆಯ ತೋರ್ಪುದೂ ॥ ೧ ॥ ಕಾನನದಿ ಶ್ರೀಹರಿಯನೂ । ನೆನೆದಿರ್ದ—ಸೂನುವನು ನಾ ತಂದೆನೂ ॥ ಜ್ಞಾನಿಗಳು ನಿಮ್ಮೊಳಾನೂ । ಈ ವಿಷಯ—ಸಾನುರಾಗದಿ ಕೇಳ್ವೆನೂ ॥ ೨ ॥ ಹಿಂದುಮುಂದಿನ ಸ್ಥಿತಿಗಳಾ । ಮಮತೆಯಲಿ—ಕಂದನು ರುವಿಕ್ರಮಗಳಾ ॥ ಒಂದುಳಿಯದೆಲ್ಲವೆನಗೇ । ನೀವುಸುರಿ—ರೆಂದು ಮಣಿದನು ದ್ವಿಜರಿಗೇ ॥ ೩ ॥

ಕಂದ

ನುಡಿಗಳನಾಲಿಸಿ ಹರಿಪದ । ಜಡಜವ ನೆನೆದಾನಂದದೊಳೋಲಾಡುತ್ತಂ ॥ ಪೊಡವಿಯ ಸುರರೀ ತೆರದಿಂ । ಕಡು ವಿಕ್ರಮಿಯೊಡನುಸುರಿದರಾಗತಿನಯದಿಂ ॥ ೧ ॥

ಕೇತಾರಗೌಳ—ಝಂಪೆ

ಧರಣಿಪತಿ ಲಾಲಿಸಯ್ಯಾ । ನಿನಗೊರೆವ—ಭರಿತ ಸಂತಸ ಸುದ್ದಿಯಾ ॥ ಹರಿಭಜಕ ಬಾಲನಿವನೂ । ಸತ್ಕುಲಜ—ನರರೆ ಬಲು ಭಾಗ್ಯಯುತನೂ ॥ ೧ ॥ ಚಂದಿರನ ಮುಖವ ನೋಡೀ । ಹಾಸ್ಯ ಮಾ—ಳ್ಪಂದ ವೇನಮಮ ಪ್ರೌಢೀ ॥ ಮುಂದಕಿವನಿಂದುಹಾಸಾ । ನಾಮದಿವ—ಸುಂಧರೆಯ ನಾಳ್ವ ಶ್ರೀಶಾ ॥ ೨ ॥ ಭಜಕನೆನ್ನಿಸಿ ಧರೆಯಲೀ । ಬಾಳುವನು—ಸುಜನರನು ಮನ್ನಿಸುತಲೀ ॥ ನಿಜ ಸುಗುಣ ಸಾರದಿರವಾ । ಪೊಗಳುವೊಡೆ—ಭುಜಗ ಪತಿಯರಿಯ ನಿಜವಾ ॥೩॥ ಕಂದರ್ಪನಾದರಿವನಾ । ರೂಪಕುರೆ-ಹೊಂದುವನು ಮತ್ಸರವನಾ ॥ ಕಂದನಿವನಿಂದ ನಿನಗೇ । ಕೀರ್ತಿಗಳು ಬಂದಪುದು ಲೋಕದೊಳಗೇ ॥ ೪ ॥ ಹರಿಭಕ್ತನಿರವ ತಿಳಿಸೀ । ಭೂಸುರರು– ತೆರಳಿದರು ಧನವ ಗಳಿಸೀ ॥ ದೊರೆಕುಳಿಂದಕನಿತ್ತಲೂ । ರಮಣಿಯೊಡ– ನರುಹಿದನು ಸಂತಸದೊಳೂ॥೫॥

ಭಾಮಿನಿ

ಮಂದಗಾಮಿನಿಕೇಳುಸುತನಾ | ನಂದಮಯ ಪರಬ್ರಹ್ಮರೂಪನ | ನಿಂದಿರಾಧವ ದೇವದೇವನ ನಚ್ಚಿನವನೆನಿಸೀ || ಮುಂದಕಿವ ಮೂಜವನಾಳುವ | ನೆಂದರುಹಿನೆರೆ ಪೊಗಳಿ ಸಂತಸ | ದಿಂದ ನಾಮವ ನಿತ್ತಿಹರು ಶಶಿಹಾಸನೆಂದೆನುತಾ || ೧ ||

ಮಧುಮಾಧವಿ--ತ್ರಿವುಡೆ

ಈ ತೆರದಿ ಸತಿಯೊಡನೆ ಪೇಳುತ | ಪ್ರೀತಿಯಿಂ ಬಾಲಕನ ಸಲಹಿ ಪು | ನೀತನಾಗುತ ಮೂರು ಜಗದಿ ವಿ | ಖ್ಯಾತನೆನಿಸಿವನಾ ಕುಳಿಂದನು | ಅರುಹಲೇನಾ || ೧ || ದಿನದಿನದಿ ವರ್ಧಿಸಲು ಕುವರನು | ಸನುಮತದೊಳುಪನಯನ ವಿರಚಿಸಿ | ತಣಿಸಿದನು ಮೇದಿನಿಯ ಜನರನು | ಮಣಿಕನಕ ಭೂಷಣಗಳೀಯುತ | ಹರುಷದಿಂದಾ || ೨ || ಬರಹಕಾ ಶಶಿಹಾಸನನು ಗುರು | ವರನ ಬಳಿಯೊಳಗಿರಿಸೆ ಸಕಲವ | ನೊರಯುತಿರೆ ಕಲಿಯುತ್ತ ವಿದ್ಯಾ | ಭರಿತನಾದನು ಹರಿಯ ನೆನೆಯುತ | ಸುಗುಣಯುತನೂ || ೩ || ಮುದ್ದು ಶಶಿಹಾಸಕನು ತಾನುರೆ| ಬದ್ಧದಿಂಧನು ಶರದ ವಿದ್ಯೆಯ | ಶುದ್ಧಮನದಿಂ ಕಲಿತು ಲೋಕ ಪ್ರ | ಸಿದ್ಧನಾಗಿಯೆ ಮೆರೆಯುತಿದ್ದನು | ಬುದ್ಧಿಯುತನೂ || ೪ ||

ವಾರ್ಧಿಕ

ಹರಿವ್ರತವನಾಚರಿಸಿ ಪ್ರಬಲ ಬಲಯುತನಾಗಿ ಮೆರೆಯುತಿರೆ ಶಶಿಹಾಸ ಮನದೊಳಾಲೋಚಿಸಿದ ಹರಿಯನಾರಾಧಿಸದೆ ಮತ್ತರಾಗಿಹ ಭೂಪ ವರ್ಗಮಂಸದೆವುದೆಂದೂ || ಕರಿತುರಗ ಮೊದಲಾದ ವಸ್ತುಗಳ ನುರೆ ನೆರಹಿ ಭರದಿ ಧನು ಶರಧರಿಸಿ ರಥಿಕರ್ಗಳಂಬರಿಸಿ ತೆರಳಿ ತಾತನ ಪದಕೆ ವಂದನೆಯ ಗೈವುತ್ತ ಕೈ ಮುಗಿಯುತಿಂತೆಂದನೂ || ೧ || ||೧೧೭||

ಕಲ್ಯಾಣಿ—ಝಂಪೆ

ತಾತ ಲಾಲಿಪುದಿಂದು | ವಾತೊಂದ ನಲವಿನಲಿ | ಪ್ರೀತಿಯಿಂದಿಗ್ವಿಜಯ | ದಾತುರದೊಳಾನೂ || ನೂತನದಿ ಭೂಮಿ ಪರ | ವ್ರಾತವನು ಸದೆಬಡಿದು | ಖ್ಯಾತನೆನಿಸಲು ಪೋಪೆ | ನೋತುನಾರಣಕೇ || ೧ || ಹರಿಯನತಿದಿಕ್ಕರಿಸಿ | ಸಿರಿಯ ಮದದಿಂ ಸೊಕ್ಕಿ | ಮೆರೆದಿರುವ ದುರ್ಜನರ | ನೆರವಿಯನು ತರಿದೂ || ಧರೆಯೊಳಗೆ ಸದ್ಧರ್ಮ | ದಿರವನುಂನೆಲೆಗೊಳಿಸಿ | ಶರಣರನು

ಪಾಲಿಸುತಿ ವರಿಪೆ ಕೀರ್ತಿಯನೂ ॥ ೨ ॥ ವೀರತನ ಶೌರ್ಯಗಳ | ಸಾರವನು ಬೀರುತ್ತ । ವಾರಿಗವು ತಣವಿಕ್ಕಿ । ಧುರದಿರಿಪುಗಳನೂ ॥ ಮಾರಪಿತ ದಯದಿ ಬಲು | ಧೀರನೆನಿಸುತ ಜಗದಿ । ಭೂರಿ ಕಪ್ಪಗಳನ್ನು । ಹೊರಿಪೆನೆನಲದಕೇ ॥ ೩ ॥

ಕೇತಾರಗೌಳ—ಅಷ್ಟತಾಳ

ತರಳನೀ ಸುಮ್ಮನಿಂತೊರೆಯುವೆ ಯೇತಕೆ । ಧುರವಿದು ನಿನಗೆಸಲ್ಲಾ । ಪುರದೊಳು ಪಾಲ್ಬೆಣ್ಣೆ ಸವಿಯುತ್ತಲಿರೆ ನೀನು । ಹರುಷವಪ್ಪುದು ಮನಕೇ ॥ ೧ ॥

ಮಾರವಿ—ಏಕತಾಳ

ಜನಕನೆ ಬಿಡು ಬಿಡು ನುಡಿಯದಿರಿನಿತನು । ಕನಲುತ ರಿಪುಗಳನೂ ॥ ಘನತರ ಬವರದಿ । ತರಿಯುವೆ ನರಿತಿದ ಮನಕರಗುವುದೇನೂ ॥ ೧ ॥

ಕೇತಾರಗೌಳ—ಅಷ್ಟತಾಳ

ಧುರಪರಾಕ್ರಮಿಗಳು | ಪಲಬರುಂಟಿಳೆಯೊಳು | ಭರಿತ ವಿಕ್ರಮಯುತರೂ ॥ ತೆರಳುತ್ತಲವರೊಳು | ಬವರವೆಂತೆಸಗುವೆ। ಬರಿದೆ ಮಾತಾಡದಿರೂ॥೨॥

ಮಾರವಿ—ಏಕತಾಳ

ಮರಿ ಸಿಂಗನಸುರೆ | ಗೆಲ ಬಲ್ಲುದೆ ಕರಿ | ತರಣಿಯನಾ ತಮವೂ ॥ ಹರನನು ಕಾಮನು ! ಗುರುಡನವುರಗನು । ತರಿವುದು ಜೋದಿಗವೂ ॥ ೨ ॥

ಕೇತಾರಗೌಳ—ಅಷ್ಟತಾಳ

ಎಷ್ಟು ಪೇಳಿದರೇನು | ದುಷ್ಟರ ಬವರವು | ಕಷ್ಟವೆಂಬುದ ತಿಳಿದೂ । ಪಟ್ಟಣದೊಳಗಿರು । ದುಷ್ಟ ಮರ್ದನ ಮುಂದೆ | ಕೊಟ್ಟಪ ಮನವೊಲಿದೂ ॥ ೩ ॥

ಮಾರವಿ—ಏಕತಾಳ

ಹರಿಯನು ನೆನೆಯುವ । ಕಾರಣ ಶರಣರ | ಪೊರೆಯುವನಾಮಹಿಮಾ ॥ ದುರುಳರ ಹರಿಸುವ | ಚಿತ್ತವನಿತ್ತರೆ । ಮರುಗುವಿರೇನಮಮಾ ॥ ೩ ॥

ಭಾಮಿನಿ

ಎಂದು ನಾನಾ ತೆರದ ಪೌರುಷ । ದಿಂದ ಪಿತನನೊಡಂಬಡಿಸಿ ರಣ । ಕೆಂದು ವೀಳೆಯಗೊಂಡು ಮಾತೆಯ ಗೃಹಕೆ ನಡೆತಂದೂ ॥ ಇಂದುಹಾಸನು

ಪದಕೆ ವಂದಿಸು । ತೆಂದನೆಲೆಮುವು ಜನನಿ ಚಿತ್ತವಿ । ಸೊಂದು ಮಾತನೆನುತ್ತ ನುಡಿದನು ಮಧುರ ವಚನದಲೀ ॥ ೧ ॥

ಸೌರಾಷ್ಟ್ರ—ಅಷ್ಟತಾಳ

ಲಾಲಿಸಿ ದಯವಿಡುತೆನ್ನ ಬಿನ್ನಪವನ್ನು । ತಾಯೆ ಕೇಳೂ ॥ ಜನಪಾಲರ ಜಯಿಸಲು ಪೋಗುವೆ ನಾನೀಗ । ತಾಯೆ ಕೇಳು ॥ ೧ ॥ ದೊರೆಗಳ ಗರ್ವವ ಮುರಿಯದಿದ್ದರೆ ತಾನು । ಮಾತೆ ಕೇಳೂ ॥ ನಿಮ್ಮ—ತರಳನೆ ಶ್ರೀ ಹರಿ ಭಜಕನೆ ಯೋಚಿಸು । ಮಾತೆ ಕೇಳೂ॥ ೨ ॥ ಅಪ್ಪಣೆಯೆನಗಿತ್ತು ಶೀಘ್ರದಿಂ ಕಳುಹಿಸು । ಅಮ್ಮ ಕೇಳೂ । ಇದ—ಕೊಪ್ಪಿ ನೀ ಹರುಷವತಾಳಿರು ಮನದೊಳು । ಅಮ್ಮ ಕೇಳೂ ॥ ೩ ॥ ವೀರರ ಗೆದ್ದು ನಾ ಕಪ್ಪವ ತರುವೆನು । ಜನನಿ ಕೇಳೂ॥ ಎಂದ - ಧೀರವಾಣಿಯ ಕೇಳಿ ತರಳನಿಗೆಂದಳು ॥ಜನನಿ ಕೇಳೂ ॥ ೪ ॥

ನೀಲಾಂಬರಿ—ಏಕತಾಳ

ಯಾತಕೆಂತ ಮಾತನುಡಿದೆ । ಕಂದ ಕಂದಾ । ಬಾಲಗೇತಕಕಟ ಬವರ ಕೇಳು । ಕಂದ ಕಂದಾ ॥ ನೀತಿಯಲ್ಲ ನಿನ್ನ ವಚನ । ಕಂದ ಕಂದಾ । ಪುರದಿಪ್ರೀತಿಯಿಂದಲಿರುವುದುಚಿತ । ಕಂದ ಕಂದಾ ॥ ೧ ॥

ತೋಡಿ—ಅಷ್ಟತಾಳ

ಥರವಲ್ಲಾ । ಮಾತೆ—ಥರವಲ್ಲಾ ॥ ಪಲ್ಲ ॥ ಥರವಲ್ಲ ನೀನಿಂತು ಪೇಳುವ ನುಡಿಯೂ । ಧುರಕಾಗಿ ನಾನೀಗ ಪೋಪ ಸಂಗತಿಯೂ । ನೆರೆ ವಿರೋಧಿಗಳನ್ನು ಜಯಿಸುವ ಪರಿಯೂ । ಭರಿತ ಸಂತಸ ನಿನಗೀವುದು ಖರೆಯೂ ॥ ಥರವಲ್ಲಾ ॥ ೧ ॥

ಗೌಳ ನೀಲಾಂಬರಿ—ಏಕತಾಳ

ಒಂದು ಗಳಿಗೆ ಬಿಟ್ಟು ನಿನ್ನ । ಕಂದ ಕಂದಾ । ಬಾಳು—ವಂದವನ್ನು ಕಾಣೆ ನಾನು । ಕಂದ ಕಂದಾ ॥ ಹೊಂದಿಸೋಲವನ್ನು ನೀನು । ಕಂದ ಕಂದಾ। ಪುರಕೆ—ಬಂದರೆನ್ನ ನಿಂದಿಸುವರು ॥ಕಂದ ಕಂದಾ ॥ ೨ ॥

ತೋಡಿ—ಅಷ್ಟತಾಳ

ಜನನಿ ಚಿತ್ತವಿಸು ಭೂಪರ ಕುಲಗಳನೇ । ಹನನ ಗೈಯುದೆ ಮತ್ತೆ ಪುರವ ಸೇರುವೆನೇ॥ ವಿನಯಾದಿ ಹರಸೆನ್ನ ಜಯಸೇರುವಂತೇ । ಚಿನ್ಮಯಾತ್ಮಕ ಹರಿ ಕೃಪೆ ದೋರುವಂತೇ ॥ ಥರವಲ್ಲಾ ॥ ೨ ॥ ॥೧೩೬॥

ಭಾಮಿನಿ

ತರುಣಿಮಣಿಗತಿ ಧೈರ್ಯವರುಹಲು । ತರಳನನು ಬಿಗಿಯಪ್ಪಿ ಸಂತಸ । ಶರಧಿಯೊಳಗೋಲಾಡಿ ಪರಸುತ ನೀತಿಗಳನರುಹೀ ॥ ತೆರಳು ಜಯವಧು ನಿನ್ನ ಸೇರಲಿ । ಧರೆಯಧಿಪರತಿಕಪ್ಪವೀಯಲಿ । ಹರಿಯು ನಿನ್ನನು ನಿರತ ಸಲಹಲಿ ಯೆನುತ ಬೀಳ್ಕೊಡಲೂ ॥ ೧ ॥

ಕಾಂಬೋಧಿ—ಮಟ್ಟೆತಾಳ

ಬಂದನಾ ಶಶಿಹಾಸ ಸಮರಕೇ । ಸಂತೋಷದಿಂದ—ಮಂದಿಗಳನು ಕೂಡಿ ಮುಂದಕೇ ॥ ಸ್ಯಂಧನವನು ಹರಿಸಿಬೇಗ ।ದಿಂದ ನೃಪರ ರಾಜ್ಯಕಾಗ । ಮುಂದುವರಿದು ಬಂದು ನಿಂದು । ಹಂದೆನೃಪರನೆಲ್ಲಗೆಲಿದು । ಬಂದನಾ ॥ ೧ ॥ ಓಡುತಿರಲು ಮತ್ತೆ ಭಯದೊಳೂ । ಪಟ್ಟಣಿಗರೆಲ್ಲ—ನೋಡುತವರ ಕರೆದು ಮುದದೊಳೂ ॥ ಗಾಢದಿಂದಲಾಗ ಮಾ । ತಾಡುತವರ ಮನದ ಖೇದ । ಹೋಡಿಸುತ್ತ ಸಂತಸದೊಳಗಾಡಿಸುತ್ತ ನಡೆದಮುಂದೆ ॥ ಬಂದನಾ ॥ ೨ ॥

ವಾರ್ಧಿಕ

ಧುರಕಣನೊಳಂಗನಂ ಸವರುತ್ತ ವಂಗನಂ । ತರಿದು ಕಾಳಿಂಗನಂ ಸೋಲಿಸುತ ಕೇರಳನ । ಸೆರೆವಿಡಿದು ಚೈದ್ಯನೇಪಾಳರಂ ಮುರಿದು ಬರ್ಬರನ ನೊಕ್ಕಲಿಕ್ಕೀ ॥ ಭರಿತ ವಿಕ್ರಮದಿಂದ ಶಶಿಹಾಸ ಮುಂದರಿವ । ಭರಕೆ ಬ್ರಹ್ಮಾಂಡ ನಡನಡುಗುತಿರೆ ರೋಷದಿಂ । ಧರಣಿಗುರೆ ಸೀಮಂತ ಮಣಿಯ ಪೋಲ್ಮೆರೆಯು ತಿಹ ಕಾಂಭೋಜ ಕೈತಂದನೂ ॥ ೧ ॥ ॥೧೪೦॥

ಕಂದ

ಭರದಿಂ ಬಾಗಿಲಕಾದಿಹ । ಚರರಂಗದರಿಸಿ ಬೆದರಿಸಿ ಚಂದಿರಹಾಸಂ ॥ ಕರೆದತಿಹಿತದಿಂದವರೊಡ । ನುರುವಿಕ್ರಮದಿಂ ನುಡಿದಂ ಘನರವದಿಂ ॥ ೧ ॥

ಸೌರಾಷ್ಟ್ರ—ತ್ರಿವುಡೆ

ಚರರು ಕೇಳಿರಿ ನಿಮ್ಮ ದೊರೆಯೊಳು । ಧುರವೆಸಗೆ ಬಂದಿರುವೆನೆಂಬುವ । ನರುಹಿ ಮಗುಳಲ್ಲದೊಡೆ ಕಪ್ಪವ । ತೆರಲಿ ನಮಗೇ ॥ ೧ ॥ ಆರೆಲೋ ನೃಪ ಕುವರ ನಿನ್ನವಿ । ಚಾರವಾವುದು ಬವರವೇತಕೆ ॥ ಧಾರಿಣಿಪನೊಳು ಹಳಚಿ ಕೆಡುವೆಯ । ಸಾರುಪುರಕೇ ॥ ೨ ॥ ಮಂದಮತಿಗಳ ತೆರದಿಪೇಳುವು ।

ದಂದವೇ ನೀವರಿತುದಿಲ್ಲವೆ || ಯಿಂದು ಹಾಸನು ವಿಕ್ರಮಾನ್ವಿತ | ನೆಂದು ಜಗದೀ || ೩ || ಹರನು ರಣಕೆಂದೆನುತ ಬಂದರು | ತೆರಳ ನಿಮ್ಮಯ ದೊರೆಯು ನೀಹುಲು || ತರಳನವನೊಳು ಹಳಚಿ ಗೆಲುವೆಯ | ಸರಿಯೊಹಿಂದೇ || ೪ || ಎಂದ ಮಾತನು ಕೇಳಿ ಬೋಷದೊ | ಳಂದವರ ಕರಗಳನು ಬಂಧಿಸು || ತೆಂದ ನಿಮ್ಮಯ ದೊರೆಯ ಸಡಗರ | ವಿಂದು ನೋಳ್ಪೆ || ೫ || ಬರಲಿ ನಿಮ್ಮಯ ಭೂಪ ಹಳಚಲು | ತೆರಳುತವಗಿದನರುಹಿರೆಂದೆನೆ | ಭರದೊಳೋಡುತ ಭೀತಿ ಯಿಂದಲಿ | ಒರೆದರಿಂತೂ || ೬ ||

ಮುಖಾರಿ—ಏಕತಾಳ

ಕೇಳೋ ಮಾತನು ರಾಜಚಂದ್ರಾ | ಸದ್ಗುಣ ಸಾಂದ್ರಾ—ಕೇಳೋ ಮಾತನು ರಾಜಚಂದ್ರಾ || ಪಲ್ಲ || ಶರಧೀಯಂದದಿ ಸೇನೆ ಜೀಯಾ | ಮುಂದ ರಿದು ನಮ್ಮ—ಪುರವಾ ಮುತ್ತಿರುವುದೇನರಿಯಾ || ಪರಿಪರಿ ಶರಗಳ ಧರಿಸಿಹ ಧೀರರ | ನೆರವಿಯು ಬಂದಿದೆ | ಘುರಕೆಂದೆನುತಲೇ || ಕೇಳೋ || ೧ || ಪೊಡ ವೀಶ ವಿಧುಹಾಸನಂತೇ | ದಿಗ್ವಿಜಯಕಾಗಿ—ನಡೆದೂ ಮುಂದೈದಿಹನಂತೇ || ಬಿಡದಿರೆ ಮುಂದಕೆ | ಹೊಡೆದೆಮ್ಮನು ನಿ | ಮ್ಮೊಡೆಯನಿಗರುಹೆನು | ತೊಡ ನಟ್ಟಿದದೊರೆ || ಕೇಳೋ || ೨ || ಮುದದೀ ಕಪ್ಪವನಿತ್ತು ನೀವೂ | ಬೆಂಬಲ ವಾಗಿ—ಪದುಳಾದಿ ಸಲಹೂವ ನಿಜವೂ || ಮದವನು ತೋರಲು | ಮುದದಿಂ ನಿಮ್ಮನು | ವಧಿಸುವೆನೆನ್ನುತ | ಮದಮುಖನರುಹಿದ ||ಕೇಳೋ || ೩ ||

ಭಾಮಿನಿ

ಕೇಳಿ ಕಿಡಿಕಿಡಿಯಾಗಿ ಪ್ರಳಯದ | ಕಾಲಭೈರವನಂತೆ ಘರ್ಜಿಸಿ | ಭೂಲಲಾಮ ಸುನಂದ ಭೂಪನು ಕಿಡಿಯನುಗುಳುತಲೀ || ಕಾಲ ಮಹಿಮೆ ಯಿದಮಮ ಬೇಡರ ಬಾಲಕನು ಬಿಲ್ಲಾಳುವಾದನೇ | ತೋಳಿನುಬ್ಬಟೆ ತೋರ ಬಗೆದನೆ ನಮ್ಮೊಳಕಟೆಂದಾ || ೧ ||

ಭೈರವಿ—ಏಕತಾಳ

ಭಳಿರೇ ನಮ್ಮೊಳುಧುರವಾ | ನೆಸೆ-ದುಳಿಯುವನೇ ಬೇಡರವಾ || ಕೊಳು ಗುಳದೊಳು ನುರಿತವನೇ | ಭುಜ-ಬಲದೊಳು ವಿಕ್ರಮಿಯಹನೇ || ೧ || ಬಡಜನಪರಗೆಲಿದಿರುವಾ | ಮದ-ವಡರಲು ಶಿರಕೆಬಾಧಿಸುವಾ | ತಡೆಯದೆ ಬಲ ಸಹಿತೀಗಾ | ಮುಂದೆ—ನಡೆಯಿರಿಯೋಧರು ಜೇಗಾ || ೨ || ಸುಂದರ

ಮಣಿ ರಥವೇರಿ । ಧುರ-ಕೆಂದು ಮುಂದೈದಿಸವಾರಿ ॥ ಚಂದಿರಹಾಸನ ನೋಡೀ । ಕರೆ-ದೆಂದನು ಪುನಿಸನು ಪಾಡೀ ॥ ೩ ॥ ॥೧೫॥

ಶಂಕರಾಭರಣ—ಮಟ್ಟೆತಾಳ

ಭಳಿರೆ, ಭಾಪುರೆಲವೊ ಪ್ರೋರ । ರಣಕೆ ಬಂದೆಯಾ । ಬಲು ಸಮರ್ಥ ಶೌರ್ಯಗಳನು । ತಿಳಿಯದಾದೆಯಾ ॥ ಗಳಹು ನಿನ್ನ ತಾತನಾರು । ದೇಶವಾವುದೂ । ಕಲಹಕಾಗಿ ಬಂದುದೇಕೆ । ಗೆಲವು ದೊರೆಯದೂ ॥ ೧ ॥ ಬುದ್ಧಿ ಶೂನ್ಯಕೇಳು ಸುಪ್ರ । ಸಿದ್ಧ ವೀರನಾ । ಬದ್ಧದಿಂ ಶ್ರೀಹರಿಯ ಪಾದ ಪದ್ಮ ಭಜಕನಾ ॥ ಶುದ್ಧರಣವಿಚಾರವರಿತ ಪ್ರಾಜ್ಞವಂತನಾ । ಯುದ್ಧದಿಂದ ಜಸವ ಪಡೆದ ಚಂದ್ರಹಾಸನಾ ॥ ೨ ॥ ವೀರ ವಿಕ್ರಮಗಳ ನೀನು । ತಿಳಿದು ದಿಲ್ಲೆಲಾ । ಶೂರ ಕುಳಿಂದವರನ ಸಾಕು । ತರಳನರಿಯೆಲಾ ॥ ಸೇರಿ ತನ್ನ ಪಾದವನ್ನು ಕಪ್ಪವೀಯಲೂ । ನಾರಿಸುತರ ಕಾಣಬಹುದು ನಿನಗೆ ಯಿನ್ನಲೂ ॥ ೩ ॥

ಭೈರವಿ—ಏಕತಾಳ

ನಿಲ್ಲೆಲೊ ನುಡಿಯದಿರಿನ್ನಾ । ಹುಲು—ಸೊಲ್ಲನು ತರಿಯುವೆ ಮುನ್ನಾ॥ ಖುಲ್ಲನೆ ಬೆದರುವನಲ್ಲಾ । ಧುರ-ಝಲ್ಲಿಗಳರಿತಿಹೆನೆಲ್ಲಾ ॥ ೧ ॥ ಹರಿಯನು ನಿಂದಿಸಿ ಮೆರೆವಾ । ಭೂ-ವರನೇ ನಿನ್ನಯ ಗರ್ವಾ॥ ಭರದಿಂ ಶಿರಕೇರಿಹುದೂ । ಶರ-ವರುಷದೊಳಿಳಿಸುವೆನೊಲಿದೂ ॥ ೨ ॥ ಫಡಫಡ ಬೇಡರ ತರಳಾ । ನಿನಗಡಸಿಹುದೈ ಕಾಲಾ ॥ ಮೃಡನೈ ತಂದರು ರಣದೀ । ಜಯ-ಪಡೆವನೆ ತನ್ನಯ ಧುರದೀ ॥ ೩ ॥ ಕಡುಮದವೇರಿತೆ ನಿನಗೇ । ನೀ-ನುಡಿಯುವುದನುಚಿತ ಹೀಗೇ॥ ಕಡುಹನು ನಿಲಿಸುವೆನೆನುತಾ । ಶರ—ಗಡಣವ ಸುರಿದ ಘರ್ಜಿಸುತಾ ॥ ೪ ॥ ಶರಗಳನಾಕ್ಷಣ ತರಿದೂ । ಖತಿ-ವೆರೆದು ಮಹಾಸ್ತ್ರವ ತೆಗೆದೂ॥ ತರಳನೆ ತಡೆಮುಕೊಳ್ಳೆನುತಾ । ನೃಪ—ಸುರಿದನು ಬಹು ಕೋಪಿಸುತಾ ॥ ೫ ॥ ॥೧೬೨॥

ತುಚಾಪಂತು—ಮಟ್ಟೆತಾಳ

ಘೋರವಾದುದಂದಿನಾಹವಾ । ಕೇಳು ಜನಪನೇ—ಧೀರವೀರರುರು ಮಹಾರವಾ ॥ ಪಲ್ಲ ॥ ಸುರಿದ ಕಣೆಯುನವನು ಕ್ಷಣದಿ । ತರಿದು ಪೊಸತು ಶರಗಳನ್ನು । ಮರಳಿಯಸೆಯೆ ಜನಪ ನೆಡದ । ಕರದಿ ಪಿಡಿದ ಕಾರ್ಮುಖವನು।

ಭರದಿ ತುಂಡುಮಾಡೆಗಜರುತಾ । ಮುಂದೆ ನಡೆದ—ವೈರಿ ಭಟನ ಕಂಡು ಕನಲುತಾ । ಕಿನಿಸಿನಿಂದ ಮರಳಿಯುಲಘನೆತ್ತಿ ಪೊಡೆಯುತಾ । ಕೆರಳಿ ನುಡಿದ । ತಡೆದು ರಥವ । ಮುರಕ್ಕೆನುತ್ತ । ಕಟ್ಟಿಸಥವಾ ॥ ಘೋರವಾದು ॥ ೧ ॥ ಘಡ ಘಡೆಲವೊ ಭೂಪ ತನ್ನ । ಕಡುಹುತನಗಳರಿಯೆ ನಿನ್ನ । ಕಡೆಯು ಕಾಲ ಬಂತೆನುತ್ತ । ನುಡಿದು ಮುಂದೆ ರಥವಹರಿಸಿ । ತಡೆದುಗಜರಿ ಬಾಣವೆಸೆಯುತಾ । ತೇರಮತ್ತೆ—ಬಡಿದು ಚೂರು ಚೂರು ಮಾಡುತಾ । ಮುನಿಸಿನಿಂದ ಕಡುಹ ತೋರು ನಿಲುನಿಲೆನ್ನುತಾ । ಬಿಡದೆ ಹೊಡೆಯೆ ಬಿದ್ದ ಭೂಪ । ಪೊಡವಿಗಾಗ ಸುಪ್ರತಾಪ ॥ ಘೋರವಾದು ॥ ೨ ॥

ವಾರ್ಧಿಕ

ಕ್ಷಿತಿಪನಂ ಸಂಹರಿಸಿ ತತ್ಪುರದ ಪಟ್ಟವಂ। ಹಿತದಿಂದಲವನ ಸುತನಿಂಗಿತ್ತು ಶಶಿಹಾಸ।ನತಿಶಯದ ಕಪ್ಪವಂ ಪಡೆದು ಮುಂದರಿದು ಮನ್ನೆಯರೆಲ್ಲರಂಘಾತಿಸಿ॥ ಅತುಳಬಲಯುತ ತನ್ನ ನಿಳಯಕೈತಂದು ಮಣಿ । ರಥವಿಳಿದು ತಾಯಿ ತಂದೆ ಯರ ಪದಕೆರಗಿ ಭೂ । ಪತಿಗಳಂ ಗೆಲ್ದ ಹದನಂಗಳಂ ವಿವರಿಸಲು ಲೀಲೆಯಿಗೆ ಮನ್ನಿಸಿದರೂ ॥ ೧ ॥

ಭಾಮಿನಿ

ಹರುಷದೊಳು ಪಟ್ಟಾಭಿಷೇಕವ । ವಿರಚಿಸಿದ ಶಶಿಹಾಸನಿಗೆ ಶ್ರೀ । ಹರಿಯ ಕರುಣಾರಸದಿ ಸಂತಸದಿಂದ ಭೂತಳವಾ ॥ ಧುರಪರಾಕ್ರಮಿಯಾಳು ತಿರೆ ಮುದ । ವೆರಸುತೇಕಾದಶಿಯ ವ್ರತವನು ಭರಿತ ಸಂತಸದಿಂದಲೆಸಗಾ ತಿರ್ದನೊಲವಿನಲೀ ॥ ೧ ॥

ಮಧ್ಯಮಾವತಿ—ತ್ರಿವುಡೆ

ಸದಮಳನೆ ಕೇಳಿಂತು ವಿಭವದಿ । ಪದುಮಲೋಚನ ಚಂದ್ರಹಾಸನು ॥ ಮುದದೊಳಿರೆ ಬಂದಾ ಕುಳಿಂದಕ । ಚದುರನೊಡನಿಂತೆಂದನೂ । ಪದುಳ ದಿಂದಾ ॥ ೧ ॥ ಕಡುಪರಾಕ್ರಮಿ ಕೇಳು ನಮ್ಮನು । ಕಡುಹಿನಿಂದಾಳುವನು ಕುಂತಳ ॥ ಪೊಡವಿಪಾಲಕನವಗೆ ಕಪ್ಪವ । ಕೊಡುವುದುಚಿತವು ಬಾಲನೇ । ದೃಢದಿ ನೀನೂ ॥ ೨ ॥ ಸೃಷ್ಟಿಯಧಿಪತಿಯಂಧನಿರುವನು । ದುಷ್ಟ ಬುದ್ಧಿಯು ಸಚಿವನವನೇ ॥ ಪಟ್ಟವನು ಕಾಪಾಡುವನು ನೀ । ಶ್ರೇಷ್ಟನಾಗಿಯೆ ಕಪ್ಪವಾ । ಕೊಟ್ಟು ಬಾಳೂ ॥ ೩ ॥ ಹೊಂದದಿರು ಮತ್ಸರವ ತಳೆದಾ । ನಂದವನ್ನುಚಿತ

ಗಳ ಬಹುಪರಿ । ಯಿಂದಲವರವರಿಂಗೆ ಕೊಡುನೀ । ನೆಂದು ಪೇಳುತ ಪೊಕ್ಕನು । ಮಂದಿರವನೂ ‖ ೪ ‖

ವಾರ್ಧಿಕ

ಪಿತನ ಮಾತಂ ಕೇಳ್ದು ಹರುಷದಿಂ ಶಶಿಹಾಸ । ನತಿಶಯದ ವಸ್ತುಗಳ ಕಪ್ಪಕುರೆ ಜೋಡಿಸುತ । ಶತಸಂಖ್ಯೆಯಿಂದ ಹಯುಗಳ ಮೇಲೆ ಹೇರುತವ ಕಳುಹಿದಂ ವಹಿಲದಿಂದಾ ‖ ಹಿತದಿ ಮುಂದರಿಯುತಂಬರುತಿರಲು ಶ್ರೀಪತಿಯ ವ್ರತವನಾಚರಿಸೆ ನಿರ್ಮಲ ವಾರಿಯೊಳ್ಮಿಂದು । ರತಿಪತಿಯ ಪಿತನ ಭಾವಿಸು ತಸ್ತಮಯ ಸಮುಯದೊಳ್ಪತ್ತನವ ಸೇರಲವದೂ ‖ ೧ ‖

ಮಾರವಿ—ಝಂಪೆ

ಮಂದ ಬುದ್ಧಿಯು ಚರರೊ । ಳಿಂವ ಮುಂದಕೆ ಬಂದು । ಬಂದಿರೇತಕೆ ಕೇಳಿ । ರಿಂದು ನೀಮ್ಮಿಂದೂ ‖ ಸಂದನೇ ನಿಮ್ಮಯ ಕು । ಳಿಂದರೊಡೆಯನು ಪೇಳಿ । ರೆಂದ ನುಡಿಯಾಲಿಸಿ ಮ । ತ್ತೆಂದರವನೊಡನೇ ‖ ೧ ‖ ಜೀಯ ಲಾಲಿ ಪುದಿಂದು । ರಾಯನೆಮ್ಮವನು ಸು । ಪ್ರೀಯುದಿಂದಿಹನು ಹರಿ । ಪ್ರೀಯದಾ ವ್ರತಕೇ ‖ ಕಾಯಶುದ್ಧಿಯ ಮಾಡ । ಲಾಯತದಿ ಮಿಂದು ವಿ । ಧೇಯರಾಗಿಯೆ ಕಪ್ಪ । ವೀಯೆ ಬಂದಿಹೆವೂ ‖ ೨ ‖ ಅಸಮಬಲ ಶಶಿಹಾಸ । ಬಿಸಜಾಕ್ಷ ಸುಪ್ರೀತ । ವಸುಧೆಯೊಳಗತಿವೀರ । ಕುಸುಮಶರ ರೂಪಾ ‖ ಎಸೆದಿರ್ಪ ಗುಣಯುತನು । ಜಸವ ಪಡೆದಿಹನೆಮ್ಮ । ವಸುಧೀಶನಿಗೆ ಸುತನು । ರಸೆಯ ಜೈಸಿಹನೂ ‖ ೩ ‖ ಚರರ ನುಡಿಯನು ಕೇಳಿ । ಧರಿಸುತಾಶ್ಚರ್ಯವನು । ದುರುಳಮತಿಯೆಂದನಾ । ಗರರೆ ಜೋದ್ಯವಿದೂ ‖ ಒರೆಯುವರು ಬಂಜೆ ಯೆಂ । ದಿರದೆ ಮೇದಾವಿನಿಯ । ತರಳನುದಿಸಿದನೆಂತೀ । ಗರುಪುವಿರೆ ಸಟೆಯಾ ‖ ೪ ‖ ನುಡಿಯಲಮ್ಮೆವು ಪುಸಿಯ । ನಡವಿಯೊಳು ದೊರಕಿದನು । ನಡೆದಿರಲು ಬೇಟೆಗೆ । ಮ್ಮೊಡೆಯ ಹರುಷದಲೀ ‖ ಜಡಜಾಕ್ಷ ನೊಲುಮೆಯಿಂ । ಪೊಡವೀಶರನು ಗೆದ್ದು । ಪಡೆದ ವಿತ್ತಗಳ ನಿ । ಮ್ಮೊಡೆಗೆ ಕಳುಹಿದನೂ ‖ ೫ ‖

ಸುರೂಟಿ—ಏಕತಾಳ

ಕೇಳುತ ಮಾತುಗಳಾ । ಮನದೊಳು ।—ತಾಳಿದ ಚಿಂತೆಗಳಾ । ಪೇಳು ವೆನೇನನು । ಬಾಲಕನನು ಚಂ । ಡಾಲರು ತರಿಯದೆ ಪೇಳ್ದರೆ ಪುಸಿಯನು ‖ ಕೇಳುತ ‖ ೧ ‖ ಎಂದವ ಯೋಚಿಸುತಾ । ಚರರೊಡ—ನೆಂದನು ಹುಸಿನಗು

ತಾ। ಸುಂದರ ಬಾಲ ಕು । ಳಿಂದಗೆ ದೊರೆತುದಾ । ನಂದವು ತೆನಗೆನು ತಂದವ
ಹೊಗಳಿದ ॥ ಕೇಳುತ ॥ ೨ ॥ ಹೊರಿಸಿದ ಕಪ್ಪಗಳಾ । ಬಳಿಕವ—ಕರೆಸಿದ
ಸೂರಿಗಳಾ । ಪರಿಪರಿ ಭಕ್ಷ್ಯವ । ಭರದಿಂರಚಿಸುತ । ಚರರನು ಭೋಜನ ।
ವಿರಚಿಸೆ ಕರೆದನೂ ॥ ಕೇಳುತ ॥ ೩ ॥ ಚರರೈತಂದವಗೇ । ಪೇಳ್ದರು—ವರ
ಭೋಜನವೆಸಗೇ । ಮೆರೆವೇಕಾದಶಿ । ವರ ವ್ರತಕುಪಹತಿ । ಯುರೆಬಪ್ಪು
ದರಿಂ ನಿರತ ನಾವೊಲ್ಲೆವೂ ॥ ೪ ॥ ನುಡಿಗಳನಾಲಿಸುತಾ । ಕಂಗಳೊಳ್—ಕಿಡಿ
ಗಳ ಕಾರಿಸುತಾ । ಫಡಫಡ ನೀವೀ । ನುಡಿಗಳ ಪೇಳ್ದಿರೆ । ದಡಿಗರೆ ನಿಮಗತಿ ।
ಕಡುಹೇರಿತೆ ಶಿವ ॥ ೫ ॥

ವಾರ್ಧಿಕ

ಚಿತ್ತವಿಸಿ ದೂತರಿರ ನಿಮ್ಮಯ ಕುಳಿಂದಕಂ । ಮತ್ತೆ ಸುತನೋರ್ವನಂ
ಪಡೆಯುತತಿ ಸೊಕ್ಕಿದಂ । ಮತ್ತರಾದಿರಿ ನೀವು ಭೂಪನಿಂ ಮಿಗಿಲಾಗಿ ಭಳಿರೆ
ನಿಮಗೆಮ್ಮ ಮನೆಯಾ ॥ ಉತ್ತಮದ ಭೋಜನವು ರುಚಿಸದಾಯಿತೆ ನಿಮ್ಮ
ಕುತ್ತಕುರೆ ಮದ್ದನರೆದಪೆನೆಂದು ಬಹುರೋಷವೆತ್ತಿಂದ ಮಾತುಗಳನಾಲಿಸುತ
ಭಯಭರಿತ ಭಕ್ತಿಯಿಂದವರೆಂದರೂ ॥ ೧ ॥

ಕೇತಾರಗೌಳ—ಝಂಪೆ

ಸಚಿವೇಂದ್ರ ನಿಮ್ಮ ಪದದೀ । ಶರಣೆಂದು—ವಚಿಸುವೆವು ನಾವು
ಮುದದೀ ॥ ಶುಚಿಯಾದ ಹರಿ ವ್ರತವನೂ । ವಿರಚಿಪೆವು—ಸುಚರಿತ್ರ ಕೇಳು
ನೀನೂ ॥ ೧ ॥ ಅರಮನೆಯ ಭೋಜನವನೂ । ಇದಕಾಗಿ—ತೊರೆದಿಹೆವು
ಸಂಶಯವನೂ ॥ ಧರಿಸಬಾರದು ಚಿತ್ತದೀ । ವ್ರತವನುರೆ— ಮರೆಯ ಬಹುದೇ
ಲೋಕದೀ ॥ ೨ ॥ ಎಂದು ಸಚಿವಗೆ ತಿಳುಹಿಸೀ । ಸಂತಸದಿ—ನಂದ ಕಂದ
ನನು ಸ್ಮರಿಸೀ ॥ ಇಂದುಹಾಸನ ದೂತರೂ । ಮರುದಿವಸ—ಮಿಂದು
ಭೋಜನ ಗೈದರೂ ॥ ೩ ॥

ಭಾಮಿನಿ

ಮಂದ ಬುದ್ಧಿಯು ದೂತರನು ನಲ- । ವಿಂದ ಮನ್ನಿಸಿ ಕಳುಹು
ತುಚಿತದಿ । ಬಂದುಹೊಕ್ಕನು ಮಂದಿರವ ಮನನೊಂದು ಬಿಸುಸುಯ್ದೂ ॥
ಇಂದುಹಾಸನು ಧರೆಯನೆಲ್ಲವ । ಮುಂದೆ ಪಾಲಿಪನಕಟ ಬರಿದೇ । ಮಂದ
ಮತಿಗಳು ವಂಚಿಸಿದರೇನೆಂಬೆ ವಿಧಿಬಲುಹಾ ॥ ೧ ॥

ಕಂದ

ಎಂದವಯೋಚಿಸಿ ಮನದೊಳು। ಕೊಂದಪೆ ಶಶಿಹಾಸನ ವಿವಿಧೋಪಾಯ ದೊಳಂ ॥ ಮುಂದಿವ ಬಲಯುತನಾದೊಡೆ। ಕಂದರಗತಿ ಕೆಡುವುದೆನುತೆ ಮದನನೊಳೆಂದಂ ॥ ೧ ॥ ॥೧೮೭॥

ನೀಲಾಂಬರಿ—ತ್ರಿವುಡೆ

ಕಂದ ಲಾಲಿಪುದೆನ್ನ ಮೋಹನ್ನಾ । ಗುಣ—ಸಿಂಧು ವಂಶೋದ್ಧಾರ ಸಂಪನ್ನಾ ॥ ಚಂದನಾವತಿಗೆ ಪೋಗುವೆ ನಾನೂ । ಸೌಖ್ಯ—ದಿಂದ ರಾಜ್ಯವ ನಾಳುತಿರು ನೀನೂ ॥ ೧ ॥ ಬರಿದೆ ಚಿಂತಿಸಬೇಡ ಮನದಲ್ಲೀ । ವಿಪ್ರ—ವರರ ಕೆಣಕಬೇಡ ಮುದದಲ್ಲೀ ॥ ಹರನ ಧ್ಯಾನವ ನೆರೆಬಿಡದಿರೂ । ಸೇವ—ಕರ ಮೇಲೆ ಕಡು ಪ್ರೀತಿಯನು ತೋರೂ ॥ ೨ ॥ ಎಂದ ಮಾತನು ಕೇಳಿ ಮದ ನನೂ । ಭಕ್ತಿ—ಯಿಂದ ಕಾಲ್ಗೆರಗುತ್ತಲೆಂದನೂ ॥ ತಂದೆ ನಿನ್ನಯ ಮಾತ ಮೀರೆನೂ ।·ಎನೆ—ಹೊಂದಿ ತೋಷವನಾಗ ಪೊರಟನೂ ॥ ೩ ॥

ವಾರ್ಧಿಕ

ವರ ಕಮಲನೇತ್ರದಿಂ ಶೋಭಿಸುವ ಗಾತ್ರದಿಂ । ಮಿರುಪ ಸುಖ ಸಾರದಿಂ ಸೌಂದರ್ಯ ಪೂರದಿಂ । ಸ್ಮರ ಸಾನೆಯಂದದಿಂ ಮತ್ತಗಜ ಗಮ ನದಿಂ ಗುರುಪಯೋಧರಗಳಿಂದೇ ॥ ಮೆರೆವ ಹರಿ ಮಧ್ಯದಿಂ ಮರಿದುಂಬಿ ಗುರುಳಿನಿಂ । ಬಿರಿಮುಗುಳ ಪೂಗಳಿಂ ನೆರೆದಿರ್ಪ ವೇಣಿಯಿಂ । ಸುರರಿಗಾ ಶ್ಚರ್ಯವಂ ಬೀರುತಂ ಮುಂದರಿಯೆ ವಿಟರ ಹೃದಯಂ ಬಿರಿದುಮೂ ॥ ೧ ॥

ಬೇಗಡೆ—ಆದಿತಾಳ

ಬಂದಳು ಮಂತ್ರಿಜೆ । ತಂದೆಯ ಬಳಿಗೇ । ಮಂದಗುಮನೆ ಗುಣ । ಸಿಂಧು ಪೊಕ್ಕೊಳಗೇ ॥ ಬಂದಳೂ ॥ ೧ ॥ ಸ್ಮರಬಾಧೆ ತಡೆಯದೆ । ನರಳಿ ಕೋಮಲೆಯೂ। ಪೊರಟ ತಾತನ ನೋಡಿ । ಸರಸಿಜೇಕ್ಷಣೆಯೂ ॥ ಬಂದಳೂ ॥ ೨ ॥ ಪಿತನಡಿಯನು ಸೇರಿ । ಸತಿಯು ವಂದಿಸಲೂ ॥ ಸುತೆಯಳ ಪಿಡಿದೆತ್ತೀ । ಹಿತದಿ ಪೇಳಿದನೂ ॥ ಬಂದಳೂ ॥ ೩ ॥

ಭೈರವಿ—ಝಂಪೆ

ಬಾರೆ ಮೋಹದ ಸುತೆಯೆ । ಬಾರೆನ್ನ ಮರಿಗಿಳಿಯೆ ॥ ಬಾರೆ ಮುದ್ದಿನ ಕಣಿಯೇ । ಬಾರೆ ಗುಣಮಣಿಯೇ ॥ ೧ ॥ ಚಂದಿರ್ವಾನನೆ ನೀರೆ । ಸುಂದರಿಯೆ

ಸುಕುಮಾರೆ । ನೊಂದಿರುವೆಯೇನವ್ವ । ಕಂದಿರುವೆ ಬಹಳ ॥ ೨ ॥ ವನರು ಹಾಂಭಕಿ ನೀನು । ಮನದೊಲವ ನರುಹೇನು ॥ ಘನ ತರದ ಚಿಂತೆಯೆನೆ । ವನಿತೆಯುಸುರಿದಳೂ ॥ ೩ ॥

ನವರೋಜು—ಏಕತಾಳ

ಚಿತ್ತವಿಸೆನ್ನಯ ಮಾತಾ । ನಾ—ಬಿತ್ತರಿಪೇನೆಲೆ ತಾತಾ ॥ ಚಿತ್ತದಿದು ಮ್ಮನ । ವೆತ್ತದನರುಹಲಿ । ಕಿತ್ತೈತಂದಿಹೆ । ಮತ್ತೇನೆನ್ನಲಿ ॥ ಚಿತ್ತವಿ ॥ ೧ ॥ ದಿನಕರ ನಿಲ್ಲದ ನಭವೂ । ವರ-ವನಜಗಳಿಲ್ಲದ ಕೊಳವೂ । ಬಿನುಗರ ತೊರೆ ಯದ ಜನಪನ ರಾಜ್ಯವು । ಜನಕನೆ ಶೋಭಿತ । ವೆನಿಪುದೆ ಲೋಕದೀ ॥ ಚಿತ್ತವಿ ॥ ೨ ॥ ಚೂತಲತೇ ನಂದನದೀ । ಈಗ—ಪೂತಿದೆ ಜನಕನೆ ನಿಜದೀ । ಏತಕೆ ಕುಳಿತಿಹೆ । ಪ್ರೀತಿಯೊಳದ ನಿಜ । ದಾತನಿಗೀಯದೆ । ರೀತಿಯೆ ಪೇಳಿದ ॥ ಚಿತ್ತ ॥ ೩ ॥ ವರುಷದ ಕಾಲದಿಲತೆಯಾ । ನಡ—ದಿರಲು ಮುಂದಿನದರಿಯಾ । ನೆರೆ ಕಂಡಿಹಮರ । ವರಗಳ ನರಸುವ । ತೆರದಿಂ ಭರಿತದ । ತರಳೆಯುರಿರ ವೈ ॥ ಚಿತ್ತವಿಸೆನ್ನಯ ಮಾತ ॥ ೪ ॥ ॥೨೦೧॥

ವಾರ್ಧಿಕ

ತರಳೆಯ ಮನೋಗತವ ನರಿದಾಗ ಮಂತ್ರೀಶ । ವರನನರಸುವೆನೆಂದು ಪೇಳುತತಿ ಧೈರ್ಯವಂ । ಭರದಿ ಮಂದಿರವ ಪೊರಮಟ್ಟು ನಡೆದನು ಚಂದನಾವತಿಗೆ ವಹಿಲದಿಂದಾ ॥ ದೊರೆ ಕುಳಿಂದಕನವನ ಮನ್ನಿಸುತಲುಚಿತದಿಂ । ಪುರಕೆ ಬಿಜಯಂ ಗೈಸಿ, ವಿಷ್ಟರದಿ ಕುಳ್ಳಿರಿಸಿ, । ತರಳ ಶಶಿಹಾಸನನು ಕರೆಸಿ, ಕಾಣಿಕೆ ಕೊಡಿಸಿ, ಸಂತಸದೊಳಿಂತೆಂದನೂ ॥ ೧ ॥

ಘಂಟಾರವ—ರೂಪಕ

ಕುಂತಳೇಶನಾ । ಮಂತ್ರಿ ಶೇಖರಾ । ಕಂತುಪಿತ ದಯಾ । ವಂತನೊಲುಮೆಯೂ ॥ ೧ ॥ ಭರಿತವಾಗಿದೇ । ಒರೆಯಲೇನಿದೇ । ತರಳನಿವನನೂ । ಕರುಣಿಸಿರುವೆನೂ ॥ ೨ ॥ ಕರುಣದಿಂದಲೀ । ಹರಸು ಮುದದಲೀ । ಭರಿತ ಸಂತಸಾ । ಧರಿಸಿ ಸಚಿವೇಶಾ ॥ ೩ ॥ ಇಂದುಹಾಸನಾ । ಸುಂದರಾನನಾ । ದಂದ ನೋಡುತಾ । ನೊಂದುಕೊಳ್ಳುತಾ ॥ ೪ ॥ ಕಂದನಿವನನೂ । ಹಿಂದೆ ಕಟುಕರೂ । ಕೊಂದುದಿಲ್ಲವೂ । ಯೆಂದು ನೆನೆದನೂ ॥ ೫ ॥ ಹೊರಗೆ ತೋರದೇ । ಮನದ ಭಾವವಾ । ಹರಷಿ ಪೇಳ್ದನೂ । ದುರುಳ ಸಚಿವನೂ ॥ ೬ ॥

ಕಾಂಬೋಧಿ—ಝಂಪೆ

ಚಿತ್ತವಿಸು ಜೀಡರೊಳ । ಗುತ್ತಮನೆ ನಿನ್ನೊಡನೆ । ಬಿತ್ತರಿಪೆ ನಿನ್ನ ಸಮ ರಾದಾ ॥ ಚಿತ್ತ ಶುದ್ಧರಕಾಣೆ । ಪೃಥ್ವಿಯೊಳು ಬಲಯುತರ । ನ್ನೊತ್ತಿ ಕೀರ್ತಿಯ ಪಡೆದನೀತಾ ॥ ೧ ॥ ಹರುಷವಾಯಿತು ಮನಕೆ । ತರಳವರ ನುರುಗುಣಕೆ । ಭರಿತ ವಿಕ್ರಮಕೆಂದು ಪೇಳೀ ॥ ದುರುಳಮತಿ ಯೋಚಿಸಿದ । ನರರೆ ವಿಪ್ರರ ನುಡಿಯು । ಮೆರೆಯುವಂತಾಯ್ತೀಗ ಜಗದೀ ॥ ೨ ॥ ಸುತರಿಗಿವ ನಿಂದ ಬಾ । ಧಕವಿಹುದು ಬಲಯುತನ । ಹತಿಸುವೆನುಗರಳವನ್ನಿತ್ತೂ ॥ ಖತಿ ಯಿಂದ ಬವರ ವೆಸಗಲ । ಸಾಧ್ಯವೆಂದೆನುತ । ಹಿತದಿ ಶಶಿಹಾಸನೊಡನೆಂದಾ ॥೩॥

ಮಧುಮಾಧವಿ—ಏಕತಾಳ

ಲಾಲಿಸಿ ಕೇಳೆನ್ನ ಮಾತವಿಖ್ಯಾತಾ । ಪೇಳುವೆನೊಂದಾನು ನಿನ್ನೊಳು ಪ್ರೀತಾ ॥ ಶೀಲಗುಣಾನ್ವಿತ ಮದನನೆಂಬವನೂ । ಜಾಲವಲ್ಲಾಳುವ ದೊರೆಯ ರಾಜ್ಯವನೂ ॥ ೧ ॥ ಭರಿತ ಗುಟ್ಟಿನ ಕಾರ್ಯವೊಂದಿದೆ ಮಗನೇ । ತೆರಳೀನೀ ನವಗದನರುಹಿ ಬರ್ಪುದನೇ ॥ ನೆರೆ ಸಂತೋಷದೊಳಾನು ಕಾದು ಕೊಂಡಿ ಹೆನೂ । ಕರುಣಾದಿ ನೀನದವಾಡೆ ತಕ್ಕವನು ॥ ೨ ॥ ಎಂದ ಮಾತನು ಕೇಳಿ । ಹೊಂದಿ ತೋಷವನೂ । ಇಂದು ಹಾಸನು ಪೇಳ್ದ । ತೆರಳುವೆ ನಾನೂ ॥ ಮುಂದಿ ಮಾರ್ಬಲಗಳ ಕೂಡಿ ಮೋದದಲೀ । ಮುಂದೈದು ತವಗರುಹಿ । ಬರುವೆ ನಿಮಿಷದಲೀ ॥ ೩ ॥ ವಿನಯಾದಿ ಪೇಳಿರಿ । ಮಾಳ್ಪ ಕಜ್ಜಗಳಾ । ಎನ ಲದ ಕೇಳಿ ತಾ ನೊರೆದ ಮಾತುಗಳಾ ॥ ತನಯ ನೀನೋರ್ವನೇ ಪೋಗಬೇಕಿ ದನೂ । ಜನರರಿಯ ಬಾರದೆಂದಿತ್ತನೋಲೆಯನೂ ॥ ೪ ॥

ಭಾಮಿನಿ

ಓಲೆಯನು ಕೈಕೊಂಡು ಮನದಲಿ । ಶ್ರೀ ಲಲಾಮನ ನೆನೆದು ಬಳಿಕಾ । ಲೋಲನಯನ ಸುಶೀಲ ಸದ್ಗುಣ ಮಾಲ ಶಶಿಹಾಸಾ ॥ ಪಾಲಿಸಿದ ತಾಯ್ತಂದೆ ಯರ ಪದ। ಧೂಳಿಯನು ನಿಜ ಶಿರದೆ ಧರಿಸುತ । ಲೀಲೆಯಿಂ ಬರುತಿರಲು ಮುಂದಕೆ ಕಂಡವನವೊಂದಾ ॥ ೧ ॥ ॥೨೧೬॥

ವಾರ್ಧಿಕ

ಶರತರದೊಳುಲಿಯುತಿಹ ಶುಕಗಳಿಂ ಪಿಕಗಳಿಂ । ಮೊರೆ ಮೊರೆದು ಸಂಚರಿಪ ಹರಿಗಳಿಂ ಕರಿಗಳಿಂ । ಪರಿ ಪರಿಯ ಕುಸುಮದಾ ಗರಗಳಿಂ ಸರಗಳಿಂ

ಫಲ ಭರಿತ ತರುಗಳಿಂದೇ ‖ ತಿರು ತಿರುಗಿ ಸುಳಿಯುತಿಹ ಮಿಗಗಳಿಂ ಖಗಗಳಿಂ । ಮರಮರದೊಳಿರ್ದ ವಲ್ಲರಿಗಳಿಂದಳಿಗಳಿಂ । ಬೆರೆಬೆರೆವ ಹಂಸಗಡಣಂಗಳಿಂ ಕಂಗಳಿಂ । ಗತಿರಮ್ಯತರವಾದುದೂ ‖ ೧ ‖ ಎತ್ತ ನೋಡಿದೊಡತ್ತ ಮಣಿಶಿಲಾ ರೋಚಿಯಿಂ । ಮತ್ತಧಿಕ ತೆರದಿಂದ ತೊಳಗದಚಲಂಗಳಂ । ಚಿತ್ತಕಾನಂದವಂ ಬೀರದಿಹ ಪೊಲಗಳಂ । ಜಲಮಿಲ್ಲದಿಹ ಕೊಳಗಳಾ ‖ ಸುತ್ತಲೊತ್ತೊತ್ತಾಗಿ ಮುತ್ತುತ್ತ ಬೆಳೆದು ಸುಮು । ಪೆತ್ತು ಸಂತಸವೆತ್ತು ಜನಕಿತ್ತು ಮೆರೆಯದಿಹ । ಬಿತ್ತರದ ಬನಸಹಿತಲತ್ತಿತ್ತ ಲೆತ್ತಲರಸಲು ಕಾಣೆ ನಾ ಕಾಡೊಳೂ ‖ ೨ ‖

ಸೌರಾಷ್ಟ್ರ—ತ್ರಿವುಡೆ

ನಡು ಪಗಲಮಾರ್ತಾಂಡನುರುಬೆಯ । ತಡೆಯಲಾರದೆ ಭಕ್ತವರ ತಾ । ನೊಡನೆ ವಾಜಿಯನಿಳಿದು ಸರಸಿಯ । ತಡಿಗೆ ಬಂದೂ ‖ ೧ ‖ ಉತ್ತಮುದವಾರಿ ಯಲಿ ಸ್ನಾನವ। ಬಿತ್ತರಿಸಿ ಶ್ರೀಪತಿಯ ಪೂಜೆಯ । ಚಿತ್ತಶುದ್ಧದಿಮಾಡಿ ಜಯ್ಯ ವನು । ಮತ್ತೆಬೇಡೀ ‖೨‖ ತಂದ ಫಲಹಾರವನು ಭುಂಜಿಸು ।ತೊಂದು ಮಾಮ ರನಡಿಯ ಸೇರುತ । ಲಿಂದುಹಾಸನು ಭರದಿ ನಿದ್ರಾನಂದನಾದಾ ‖ ೩ ‖

ವಾರ್ಧಿಕ

ಚಿತ್ತವಿಸು ಭೂಪಕುಲ ಸ್ತುತ್ಯ ಜನಮೇಜಯನೆ । ಯಿತ್ತ ಕುಂತಳ ಪುರದಿ ಮತ್ತಕಾಶಿನಿ ವಿಷಯೆ । ಚಿತ್ತಜನ ತಾಪದಿಂ ಬಳಲಿ ಸಖಿಯರ ಕೂಡಿ ಜಲಕೇಳಿಗೆಂದಾಗಲೂ ‖ ಉತ್ತಮದ ಕೊಳಕೈದಿ ಚಿತ್ತ ಮೆಚ್ಚುವ ತೆರದಿ । ಬಿತ್ತರಿಸೆ ಮೋಹಮಂ ವಸನಂಗಳಂ ಕಳಚಿ । ಮತ್ತವರು ಮತ್ತಗಜಗಳ ತೆರದಿ ಪೊಕ್ಕೆಸೆದರೇನೆಂಬೆ ಪೊಸ ಪರಿಯನೂ ‖ ೧ ‖

ಸುರುಟಿ—ಏಕತಾಳ

ಆಡಿದರಾಡಿದರೂ । ನೀರಾಟವ—ನಾಡಿವರಬಲೆಯರೂ ‖ ಪಾಡುತ ಸಂತಸ । ಗೂಡುತ ಮೂಡುತ । ಗಾಡದಿ ಸರಸವ । ನಾಡುತ ಮುದದೊಳ । ಗಾಡಿದರಾಡಿದರೂ ‖ ೧ ‖ ಚಿತ್ತಜನಾನೆಯರೂ । ಸಂತಸ—ವೆತ್ತಾ ನೀರೆ ಯರೂ ‖ ಉತ್ತಮ ವಾರಿಯ । ನತ್ತಿತ್ತೆರಚುತ ಮತ್ತಕಾಶಿನಿಯರು । ಬಿತ್ತರ ದಿಂದಾಗ । ಲಾಡಿದರಾಡಿದರೂ ‖ ೨ ‖ ಸರಸಿಜವನು ನೋಡೀ । ಬಲು ತೆರ- ಸರಸವ ತಾವಾಡೀ । ತರಳೆಯರೆಂದರು । ಹರುಷದಿ ತಮ್ಮಯ । ವರ ಮುಖ ಕೆಣೆಯಿದು । ಯಿರದೆಂದೆನುತಲೇ । ಆಡಿದರಾಡಿದರೂ ‖ ೩ ‖

ಬೇಗಡೆ —ಏಕತಾಳ

ಲಾಲಿಸೆಲೆ ಸಖಿ । ಬಾಲೆ ಚಂಪಕೆಯೇ ॥ ಭೂಪಾಲಕನ ಸುತೆ । ಲೋಲ ನಯನೆವಿ । ಶಾಲ ಗುಣ ಮಣಿಯೇ । ಶೀಲೆ ನೋಡತಿ । ಲೀಲೆಯಿಂದಲಿ । ತಾಳಿ ಭ್ರುಮೆಯನು ಮೇಲೆ ಸುಳಿಯುತ । ನೀಲ ನೀರಜ । ಜಾಲವೆಂದೇ । ಹಾಳು ಭ್ರುಮರದ । ದಾಳಿ ಬಪ್ಪುದ ॥ ಲಾಲಿಸೆಲೆ ॥ ೧ ॥ ದಿಟ್ಟ ಹಂಸಗ । ಳೊಟ್ಟುಗೂಡುತಲೀ । ನಮ್ಮವರ ನೋಡುತ । ತಟ್ಟನೈದಿದು । ವೆಷ್ಟು ವೇಗ ದಲೀ ॥ ಸೃಷ್ಟಿಯೊಳು ಬಲು । ಶ್ರೇಷ್ಟತೆಯ ಪಡೆ । ದಿಷ್ಟು ಮತ್ಸರ । ಕಟ್ಟಿ ಕೊಳೆ ಶಿವ । ಕಷ್ಟವಲ್ಲವೆ । ದುಷ್ಟತನಕಾ । ನೆಷ್ಟು ಪೇಳಲಿ ಕೆಟ್ಟ । ಹುದೆ ಮತಿ । ಲಾಲಿಸೆಲೆ ॥ ೨ ॥ ಬಿಸಜ ಗಂಧಿನಿ । ವಿಷಯೆ ಲಾಲಿಪುದೂ । ನೋಡಿತ್ತ ಜಲಮೊಳ । ಗೆಸೆವ ವಿಹಗ್ಗಳ । ವಿರಸವನ್ನೊಲಿದೂ । ಕುಸುಮ ಬಾಣನ । ಯೆಸುಗೆಯಿಂದ್ದಲಿ । ಬಸವಳಿದು ವಿಟ । ರೊಸೆದು ಸ್ತ್ರೀಯರ । ಯಶವ ನೋಡುವ । ಪೊಸ ಪರಿಯ ತೆರ । ವಿಷದವಾಗಿಯೆ । ಝುಸವು ನೋಳ್ಪದ ॥ ಬಿಸಜ ॥ ೩ ॥

ವಾರ್ಧಿಕ

ಮೆರೆವ ನೀರಾಟದಿಂ ದೋಟದಿಂ ಕೂಟದಿಂ । ತರಳೆಯರು ಸಂತಸ ದೊಳೊಲಿಯುತಂ ನಲಿಯುತಂ । ಸರಸಿಯೊಳು ಬಹು ಪರಿಯ ಮೋದದಿಂ ನಾದದಿಂ । ದೆಸೆದಿರ್ದರೇನೆಂಬೆನೂ ॥—ಸರಸಿರುಹನೇತ್ರೆಯರು ಮೋಹವಂ ಪೂರೈಸಿ । ತರತರದ ಮಡಿ ವರ್ಗವಂ ಧರಿಸುತುತ್ಸಹದಿ । ವರಪುಷ್ಪಗಳ ಕೊಯ್ಯಲುರವಣಿಸಿ ಸುತ್ತಿದರು ಬಳಿಕವರು ಕಾನನವನೂ ॥ ೧ ॥

ಭಾಮಿನಿ

ಹರುಷದೊಳು ಮಂತ್ರಿಜೆಯು ಸುಮುಗಳ । ನರಸಿ ಮುಂದೈದುತ್ತ ಬರುತಿರೆ । ಮರನಡಿಯೊಳೊರಗಿರ್ದವಿದುಹಾಸನನು ನೆರೆನೋಡೀ ॥ ಸ್ಮರನುರುಬೆಗುರೆ ಬೆಚ್ಚಿನಾಚುತ । ನೆರೆಯಲೆಳಸುತ ಬೆದರಿ ತರಳೆಯು । ಭರಿತ ಗುಣ ಯುತ ಹರಿಯ ಭಜಕನನೀಕ್ಷಿಸಿದಳೊಲಿದೂ ॥ ೧ ॥ ॥೨೩೦॥

ಶಂಕರಾಭರಣ— ಅಷ್ಟತಾಳ

ಕಂಡಳೂ । ಮಂತ್ರಿಜೆ । ಕಂಡಳೂ ॥ ಪಲ್ಲ ॥ ಕಂಡಳು ಕಣ್ಣ ಮುಂದೊಲಿದೂ । ನೃಪ—ಗಂಡ ಭೇರುಂಡನ ನಲಿದೂ । ಮಾ—ರ್ತಾಂಡ ಸನ್ನಿಭನೆಂದು ತಿಳಿದೂ । ಮರೆ—ಗೊಂಡುರೆ ಬಳಿಕ ಮುಂದರಿದೂ ॥ ರಾಜ—ತಂಡದಿ

ಶೋಭಿಪ | ಚಂಡ ಪರಾಕ್ರಮಿ | ಮಂಡಲಾಧಿಪರನು | ತುಂಡಿಸಿ ಮೆರೆದನಾ || ಕಂಡಳೂ || ೧ || ಮೂರು ಲೋಕವು ತನ್ನ ವಶದೀ | ಯಿರ—ಲ್ಯಾರಿಹರಿನ್ನು ಭೂತಳದೀ | ಬಲು—ಶೂರರೆಂದಾಗ ಮಾನಸದೀ | ಧೀರ—ಮಾರನು ತಿಳಿದು ಸಂತಸದೀ | ಸೇರಿ—ಧಾರಿಣಿಯನು ನಿದ್ದೆ | ವಿಾರಿಯೆ ಮಲಗಿಹ | ಚಾರು ಸುಂದರ ರೂಪ | ಮಾರಸನ್ನಿಭನನ್ನೂ || ಕಂಡಳೂ || ೨ || ಧೀರಜಯಂತಾದಿ ಸುರರಾ | ವಿಾರ್ವ—ವೀರ ಗಂಧರ್ವ ಕಿನ್ನರರಾ | ಶಶಿ—ಸೂರಿಯ | ಗರುಡಾದಿನಿಕರಾ | ಸೋಲ್ಪರಾರೀತಗೆಣೆ ಸುಕುಮಾರಾ | ಯೊತ—ಸೇರುತ ಮರನಡಿ | ಭೂರಿ ನಿದ್ದೆಯ ತಾಳ | ಲಾರದೆ ಮಲಗಿಹ | ನ್ಯಾರೆಂಬುದರಿಯೆನು || ಕಂಡಳೂ || ೩ || ಚಂದಿರ ಪ್ರಭೆಯ ಬೀರುವನೂ | ಭುವನ—ಸುಂದರನಾನಂದಮಯನೂ | ಯಿವನ—ಹೊಂದುತ್ತ ಸುಖಿಸಲಿಕಾನೂ | ಧನ್ಯ—ಳೆಂದು ಮಂತ್ರಿಜೆ ಸಂತಸವನೂ | ತಾನು—ಹೊಂದಿ ಸರ್ವಾಂಗವ | ನಂದು ನೋಡುತಲಿರ | ಲೊಂದು ಪತ್ರವ ಕಂಡು | ಮಂದ ಹಾಸವ ಬೀರಿ ||ಕಂಡಳೂ || ೪ ||

ಭಾಮಿನಿ

ಲೀಲೆಮಿಗೆ ಪತ್ರವನು ತೆಗೆದು ಸು | ಶೀಲೆ ತನ್ನಯ ಪಿತನ ಬರಹದ | ವಾಲೆಯೆಂದರಿದದನು ತರೆಯುತಲಧಿಕ ಸಂತಸದೀ || ನೀಲಕಂಠನ ಸ್ಮರಸಿ ತನಗನು | ಕೂಲವಾಗಿರಲೆಂದು ಮನದೊಳು | ಬಾಲೆ ತನ್ನೊಳು ತಾನೆ ವೋದಿದಳರಸ ಕೇಳೆಂದಾ || ೧ ||

ಕಾಂಬೋಧಿ—ಝುಂಪೆ

ಸ್ವಸ್ತಿ ಶ್ರೀ ಮತ್ತು ಸಚಿವರ ಶಿರೋಮಣಿ ತನ್ನ | ಪುತ್ರ ಗುಣ ಗಂಭೀರ ಧೀರಾ || ಸತ್ಯನಿಧಿ ಕೀರ್ತಿಯುತನೆಂದೆನಿಪ ಮದನಂಗೆ | ಬಿತ್ತರಿಸಿ ಕಳುಹಿರ್ಪ ಪತ್ರ || ೧ || ಶ್ರೀನಿವಾಸನ ಸಖನು ಕರುಣದಲಿ ರಕ್ಷಿಸಲಿ | ಮಾನ ನಿಧಿಯಾಗೆಂದು ಮಗುವೇ | ತಾನಧಿಕ ತರದೊಳಾಶೀರ್ವಾದಗಳ ಮಾಳ್ಪೆ | ನೀನು ಪದುಳಿಗನೆಂದು ಬಗೆವೇ || ೨ || ಧೀರ ಶಶಿಹಾಸನಿವ ಶ್ರೀಹರಿಯ ಭಜಕವರ | ಮಾರ ರೂಪನು ಕೀರ್ತಿಯುತನೂ || ಧಾರಿಣಿಯೊಳಿದಿರಿಲ್ಲ ಸೀಮೆಗರ ಸಾದಪನು | ಭೂರಿ ಹರುಷವ ತಾಳಿ ನೀನೂ || ೩ || ಹೊತ್ತುಗಳೆಯದೆ ಬಳಿಕ ನೀನವನ ಕುಲಶೀಲ | ವಿತ್ತಗಳನೀಕ್ಷಿಸುತ್ತಿರದೇ | ಮತ್ತಿವಗೆ ವಿಷವ ವೋಹಿಸುವಂತೆ ಕೊಡಲೆಮಗೆ | ವುತ್ತರೋತ್ತರ ಮಪ್ಪುದೈಸೇ || ೪ ||

ಭಾಮಿನಿ

ಧರಿಸುತಾಶ್ಚರ್ಯವನು ಪತ್ರವ | ತರಳೆಪೋದುತ ತಿಳಿದಳಿವನನೆ | ವರನು ತನಗೆಂದೆನುತ ಕಳುಹಿದ ಪಿತನು ಪುರಕಾಗೀ || ಒರೆಯಲೇನಿದೆಲಿಪಿಯೊಳಗೆ ಬೀ | ಳಿರುವ ಕಾರಣ ಕಾರ್ಯಕೆಡುವುದು | ಮರೆಯ ಮಾತುಗಳೇಕೆ ತಿದ್ದುವೆನೆಂದು ಯೋಚಿಸುತಾ || ೧ ||

ವಾರ್ಧಿಕ

ಕಿರುಬೆರಳಿನುಗುರ ಗೊನೆಯಿಂ ತರಳೆ ಮಾಮರನೊಳಿರುತಿರ್ದ ನಿರ್ಯಾಸಮಂ ತೆಗೆದು ಪತ್ರದೊಳ | ಗಿರುತಿಹ "ವ" ಕಾರವಂ ತೊಡೆದಲ್ಲಿ ಗೊಪ್ಪುವ "ಯೆ" ಕಾರವಂ ಬರೆದು ಬಳಿಕಾ || ತೆರಳಿದಳು ವಿರಹ ತಾಪದಿ ನೊಂದು ಸಖಿಜನಂ | ವೆರಸಿ ನಿಜ ಗೃಹಕ್ಕೈದಿ ಪೊಕ್ಕಳಂತಃಪುರವ | ಸರಸಿರುಹನೇತ್ರೆ ವಿಷಯೆಯು ಕಾಮನುರುಬೆಯಿಂಬೆಂದು ಬೇಗುದಿಗೊಂಡಳೂ ||೧|| ||೨೪೧||

ನೀಲಾಂಬರಿ—ರೂಪಕ

ಚಿತ್ತದಿ ತಾಳೆನು ವೇದನೆ | ಮತ್ತೀ ನೆನ್ನಲಿ ಶಿವಶಿವ | ಕತ್ತುರಿ ಮೊದಲಾಗಿರುವತಿ | ವೃತ್ತಮ ವಸ್ತುಗಳು|| ಬಿತ್ತರಿಸಲು ತಂಪೀಯದೆ | ಹೊತ್ತುವ ಬೆಂಕಿಯ ತೆರದಲಿ | ಮುತ್ತತ ಕಾಯವ ಸುಡುವುದು | ಸತ್ತೆನಾನಯ್ಯಯ್ಯೋ || ೧ || ಏತಕೆ ಗಮನಿಸಿದೆ ಕೊಳಕಾ | ನೇತಕೆ ಜಲದೊಳಗಾಡಿದೆ | ನೇತಕೆ ಸಖಿಯರ ತೊರೆಯುತ | ಪ್ರೀತಿಲಿ ಹೂಗಳನೂ || ಏತಕೆ ಕೊಯ್ಯಲು ತೆರಳಿದೆ | ನೇತಕೆ ಮಾಮರನಡಿಯೊಳು | ನೂತನ ಪುರುಷನ ನೋಡಿದೆ | ಭೂತೇಶನೆ ಸಲಹೂ || ೨ || ಎಂದೀಪರಿಯಿಂದಳಲುತ ಸುಂದರಿಯಿರಲವನರಿಯುತ | ಬಂದಳು ಗೆಳತಿಯು ಮುಂದಕೆ | ಚಂದಿರವದನೆಯಳಾ || ಕುಂದಿದ ಮುಖವನು ನೋಡುತ | ನೊಂದಿಹ ಪರಿಯನು ತಿಳಿಯದೆ | ಯೆಂದಳು ಮಂತ್ರಿಜೆಗತಿನಯ | ದಿಂದಲಿ ಮಾತುಗಳಾ || ೩ ||

ಆನಂದ ಭೈರವಿ—ಏಕತಾಳ

ಪ್ರೀತಿಯಿಂದ ನುಡಿವ ಮಾತ | ಸಖಿಯೆ ಕೇಳೂ ||ನಿನ್ನ—ರೀತಿ ನೋಡಲರಿಯೆನೇನ | ಸಖಿಯೆ ಕೇಳೂ || ಏತಕಾಗಿ ಚಿಂತೆಯಿಂದ ಸಖಿಯೆ ಕೇಳೂ || ನೀನು ಭೂತಳದೊಳು ಹೊರಳುತಿರುವೆ | ಸಖಿಯೆ ಕೇಳೂ || ೧ || ಬಂದ ಕಷ್ಟವುಸುರೆ ನೀನು | ಗೆಳತಿ ಕೇಳೂ || ಹೀಗೆ ನೊಂದೊಡೇನು ಫಲವು ಮುದ್ದು |

ಗೆಳತಿ ಕೇಳೂ || ಕಂದಿ ಕುಂದಿ ಬಳಲಲೇಕೆ | ಗೆಳತಿ ಕೇಳೂ || ಮಾಜ–ದಿಂದು ಪೇಳು ಹರುಷ ತಾಳು | ಗೆಳತಿ ಕೇಳೂ || ೨ || ಉಡಿಗೆ ತೊಡಿಗೆ ಬೇಡವೇನೆ | ಮಿತ್ರೆ ಕೇಳೂ | ಸರಸ–ನುಡಿಯನೇತಕಾಡೆ ನೀನು | ಮಿತ್ರೆ ಕೇಳೂ || ಒಡಲ ದಂಡಿಸುವುದು ತರವೆ | ಮಿತ್ರೆ ಕೇಳೂ | ಎಂದು ನುಡಿಯಲಾಗ ಪೇಳ್ದಳಿಂತು | ಮಿತ್ರೆ ಕೇಳೂ || ೩ ||

ಮೋಹನ—ಅಷ್ಟತಾಳ

ತೋಯಜಾಂಬಕಿ ನೀರೆ ಸಖಿಯೇ | ಮನ—ನೋಯುವ ಪರಿಯು ನಾನರಿಯೇ | ಎನ್ನ–ಕಾಯದಿ ಚಂದಿರಾನನೆಯೇ | ಬಹ—ಳಾಯಾಸವಿದೆ ಮುನ್ನ | ತಾಯೇ ನೀ ಬನ್ನ | ಹೇಯಾವಸ್ಥೆಗಳನ್ನ | ಪ್ರೀಯೆ ಪೇಳುವದೇನಾ|| ತೋಯಜಾಂಬಕಿ || ೧ ||

ಧನಸಾರಿ—ಏಕತಾಳ

ನೀರಜಾ ಮುಖಿಯೆ ಕೇಳೂ | ನಿನ್ನಯ ಮನ—ಕೇರಿಹ ವ್ಯಸನಗಳೂ | ನಾರಿ ನಾನರಿತಿಹೆ | ನೀರೆ ನಿನ್ನನು ಕಂಡು | ಮಾರನೆಚ್ಚಿಹ ಬಾಣ | ಸಾರದ ಪರಿಕಣಾ || ನೀರಜಾಮುಖಿ || ೧ ||

ಮೋಹನ—ಅಷ್ಟತಾಳ

ಮಾರನೆಂಬುವ ಬಲು ಧೀರಾ | ಬಿಲ್ಲಿಗೇರಿಸಿ ಶರವೆಸೆವುದರಾ | ಕಾಹೆ—ಸಾರಿಕವಾಣಿ ಕೇಳಿದಿರಾ | ಶೂರ—ರಾರು ಮಾಳ್ಪರು ನೋಡೆ | ಭೂರಿ ಸಂಶಯವೆನ್ನ | ಸೇರಿಹುದೆಲೆ ಪ್ರೀಯೆ | ಚಾರು ಕೋಮಲ ಕಾಯೆ || ತೋಯ || ೨ ||

ಧನಸಾರಿ—ಏಕತಾಳ

ತರಳೆ ಸಣ್ಣವಳು ನೀನು | ತಿಳಿಯೆಯಾ—ಸ್ಮರನೆಂಬ ಪಾಪಿ ತಾನು | ತರುಣಿಯರಿಗೆ ಪ್ರಾಯ | ಭರಿತದ ವೇಳ್ಯದಿ | ವಿರಚಿಸುವನು ಚೇಷ್ಟೆ | ನೆರೆ ಕಾಣಸಿಗನವಾ || ನೀರಜಾ || ೩ ||

ಮೋಹನ—ಅಷ್ಟತಾಳ

ಸ್ಮರನುರುಬೆಯ ತಾಳಲಾರೇ | ಸಖಿ—ಮರುತನು ಮುನಿಸನು ತೋರೇ | ಜೆವ—ರಿರುವುದುಮೈ ಯಿತ್ತಬಾರೇ | ಆಹಾ—ವರ ಶೀತ ವಸ್ತುಗ | ಳಿರದೆ ಬೆಂಕಿಯ ತೆರ | ಸುರಿಯಿಪುದೀಗೆನ್ನ ಹರಣವೆಂತುಳಿವುದೂ || ತೋಯಜಾಂಬಕಿ ನೀರೆ ಸಖಿಯೇ || ೩ ||

ಧನಸಾರಿ—ಏಕತಾಳ

ಬಾಲೆ ಬಾಲೇಂದು ಫಾಲೇ | ಪೇಳುವೆನೇನ—ಶೀಲೆ ಸದ್ಗುಣದ ಮಾಲೇ ॥ ಜಾಲವಲ್ಲಾಡುವೆ | ಲೋಲನು ನಿನಗಾದ | ಮೇಲೆ ಈ ಕಷ್ಟವ | ಕಾಳು ಮಾಡುವ ತಿಳಿ ॥ ನೀರಜಾ ॥ ೩ ॥

ವಾರ್ಧಿಕ

ಚಿತ್ತವಿಸು ರಾಜೇಂದ್ರ ಕೆಳದಿ ಯೊ ಪರಿಯಿಂದ | ಮತ್ತಕಾಶಿನಿ ವಿಷಯೆ ಯನ್ನು ಸಂತವಿಸುತಿರ| ಲತ್ತ ಕಾನನದಿ ವಿಧುಹಾಸನಪರಾಹ್ನದೊಳಗೆದ್ದಧಿಕವ ಹಿಲದಿಂದಾ ॥ ಉತ್ತಮದ ಹಯವೇರ್ದು ನಗರದತಿ ವಿಭವಗಳ | ಚಿತ್ತದಾನಂದ ದಿಂ ನೋಡುತತಿನಲವಾಂತು | ಪತ್ತನವ ಪೊಗಲದಂ ಚರನರುಹೆ ಮದನ ನವನಂ ಮನ್ನಿಸುತ್ತೆಂದನೂ ॥೧॥

—ತ್ರಿವುಡೆ

ಬಂದೆಯೋ ವೀರ ನೀನೂ | ಚೇಡರ ಕುಲ—ಚಂದಿರ ಗುಣಯುತನೂ | ಬಂದುದಿಂದಾನಂದವಾಯಿತು | ಮಂದಿರದೊಳಿಹರೆಲ್ಲ ಸುಖಿಗಳೆ | ತಂದೆ ತನ್ನ ವನೆಂದು ಬರುವನು | ಬಂದಕಾರಿಯವೇನು ನುಡಿನುಡಿ | ಬಂದೆಯೋ ॥ಪಲ್ಲ॥ ಜೀಯ ಲಾಲಿಪುದೆನುತಾ | ಚಂದಿರಹಾಸ—ಪ್ರೀಯದಿಂ ವಂದಿಸುತಾ | ತಾನ್ನೈ ತಂದ—ಧ್ಯೇಯವ ನೊರೆಯುತಾತಾ | ಸಚಿವನ ಪತ್ರ—ವೀಯಲು ಸಂತಸ ಗೊಳುತಾ | ನೋಯದಂತುಪಚರಿಸುತವನನು | ಪ್ರೀಯದಿಂ ಬೀಳ್ಕೊಂಡು ಮುಂದರಿ | ದಾಯತದ ಪತ್ರವನು ವಾಚಿಸು | ತಾ ಯಶೋನಿಧಿ ಹರುಷ ಹೊಂದಿದ ॥ ಬಂದೆಯೋ ॥ ೧ ॥ ಚಂದಿರಾನನೆ ವಿಷಯೇ | ತಕ್ಕವಳಿವ—ಗೆಂದಾಗ ಮದನನು ನಲಿಯೇ | ಜೋಯಿಸರನ್ನಾ—ನಂದದಿಂದಲಿ ಕರೆಯೇ | ಮುಹೂರ್ತವನವ—ರಿಂದ ಹೇಳಿ ತಿಳಿಯೇ | ಮಂದ ಬುದ್ಧಿಯ ಸೂನು ಪುರ ವನು | ಚಂದದಿಂ ಶೃಂಗರಿಸಿ ವಿಭವದೊ | ಳಂದು ತಂಗಿಯ ಧಾರೆಯೆರೆದನು | ಸುಂದರಾನನನಿಂದುಹಾಸಗೆ ॥ ಬಂದಯೋ ॥ ೨ ॥ ॥೨೫೬॥

ವಾರ್ಧಿಕ

ಅರಸ ಲಾಲಿಪುದಿಂತು ಪರಿಣಯೋತ್ಸಾಹಮಂ | ವಿರಚಿಸುತ ಶಾಸ್ತ್ರೋಕ್ತ ವಿಧಿಯಿಂದ ಭೂಸುರರ | ನೆರವಿಯನು ತಣಿಸಿದನು ದಾನದಕ್ಷಿಣೆಗಳಿಂದಾಗ ದುರ್ಮತಿಯ ಸೂನೂ ॥ ಪುರ ಜನರಿಗುಚಿತ ಸತ್ಕಾರಂಗಳನ್ನಿತ್ತು | ಮೆರೆವ

ಚಾತೂರ್ಥಿಯಂ ಕಳೆವುತ್ತ ಮದನನಿರೆ । ವರ ಚಂದನಾವತಿಯೊಳಿತ್ತಕು ಮತಿಯು ಬೇಡರೊಡೆಯನೊಡನಿಂತೆಂದನೂ ॥ ೧ ॥

ಪಂತುರಾವಳಿ—ಅಷ್ಟತಾಳ

ಏನಯ್ಯಾ । ಕುಳಿಂದ—ಯೇನಯ್ಯಾ ॥ ಪಲ್ಲ ॥ ಏನಯ್ಯ ಕುಳಿಂದ ನೀ ಗುಣಯುತನಂತೇ । ಮಾನವಾಧಿಪನಾಗಿ ಮೆರೆಯುವೆಯಂತೆ । ಹೀನ ಕಜ್ಜಗಳ ಮಾಳ್ಪವನಲ್ಲವಂತೆ । ಜ್ಞಾನ ಸ್ವರೂಪದಿ ಭರಿತ ನೀನಂತೆ ॥ ಏನಯ್ಯಾ ॥ ೧ ॥ ದೊರೆಗೆ ನೀನತಿ ವೈರ ವೆಸಗೀದೆಯಲ್ಲಾ । ತರಳನೋರ್ವನ ಮಾಡಿಕೊಂಡೂದು ಸಲ್ಲಾ । ಭರಿತ ಪಾತಕವನೀ ಗಳಿಸೀದೆಯಲ್ಲಾ । ಪರಿಹಾರ ಮಾಡುವೆ ನಾನಿದಕೆಲ್ಲಾ ॥ ಏನಯ್ಯಾ ॥ ೨ ॥ ಶ್ರೇಷ್ಟ ನೀನೆಂಬುದ ತಿಳಿಯುತ್ತಲಾನೂ । ಕೊಟ್ಟೊಡೆ ಧರೆಯನು ಮರೆಯುತೆನ್ನುವನೂ । ಗುಟ್ಟನಿಂ ಬಾಲನ ಮಾಡು ತೋರ್ವನನೂ । ಥಟ್ಟನೆ ಕೆಡಿಸಿದೆ ರಾಜ್ಯವೆಲ್ಲವನೂ ॥ ಏನಯ್ಯಾ ॥ ೩ ॥ ಭರಿತ ವಿಕ್ರಮಿಯೆಂಬ ಹೆಮ್ಮೆಯ ತಳೆದೂ । ಧುರದೊಳು ಸರ್ವರ ಗೆದ್ದು ಮುಂದರಿದೂ ॥ ಮೆರೆದಿರ್ದ ಕಾಡುಗಳೆಲ್ಲವ ತರಿದೂ । ವರದೇಗುಲಗಳನು ರಚಿಸೀದನೊಲಿದೂ ॥ ಏನಯ್ಯಾ ॥ ೪ ॥ ಯಾರ ರಾಜ್ಯವನಿತ್ತೆ ಶಶಿಹಾಸ ಗೆಂದೂ । ಮಾರಮರ್ಧನನಂತೆ ಖತಿಯೊಳಗಂದೂ । ಭೂರಿ ಭಂಗಿಸಿ ಸೆರೆ ಯೊಳಗಿಡೆನೊಂದೂ ॥ ಧೀರ ಕುಳಿಂದಕನಿರೆ ಮುಂಪೆ ಬಂದೂ ॥ ಏನಯ್ಯಾ ॥ ೫ ॥

ಭಾಮಿನಿ

ಹರುಷದೊಳು ರಾಜ್ಯವನು ತನ್ನೊಡೆ । ವಿರಿಸಿ ಕುಮತಿಯು ನೆನೆವ ಪುರದಲಿ । ಗರಳವನು ಶಶಿಹಾಸ ಗಿತ್ತನೊ ಮರೆದನೋ ಸುತನೂ ॥ ಒರೆವ ರಾರಿದನೆಂದು ಮನದೊಳು । ಮರುಗಿ ಪರಿಕಿಪೆನೆಂದು ಜವದೊಳು । ಹರಿಯು ನಡರುತ ಬರಲು ಕುಂತಳಕಾಗಿ ಪಥದೊಳಗೇ ॥ ೧ ॥

ಭೈರವಿ—ಝುಂಪೆ

ಜನಪ ಲಾಲಿಪುದುರಗ । ವಿನಯದಿಂ ಮುಂದರಿದು । ಮನೆಗೆ ತೆರಳುವ ಸಚಿವ । ನನು ತಡೆದು ಪಥದೀ ॥ ೧ ॥ ಎಂದುದೆಲೆ ಸಚಿವೇಶ । ಕುಂದದೀವರೆಗಾನು । ಚಂದದಿಂದಲಿ ನಿನ್ನ । ಮುಂದಿರದೊಳಿದ್ದೇ ॥ ೨ ॥ ತರಳ ನಿನ್ನವನೀಗ । ದುರುಳತನದೊಳು ಹಣವ । ಸರುವ ಜನರಿಂಗಿತ್ತು । ಮೆರೆವನೇನೆಂಬೇ ॥ ೩ ॥

ಆದರಿಂದ ಪುನನೊಂದು || ಸದನುಳನೆ ನಾಪ್ರೋಪೆ | ಬದಲೊಂದು ಶಾವಿ | ಗೆಂದೊದರುತ್ತದು ಪೋಗೇ || ೪ ||

ಭೈರವಿ—ಏಕತಾಳ

ಏನಚ್ಚರಿಯಿದು ಶಿವನೇ| ಸರ್ಪ—ವೇನುಸುರಿತು ಎಂಬುವನೇ|| ಏನಂದ ರಿಯೆನು ತಾನೂ | ಮನು—ಸೂಸುವು ಮಾಡಿದುದೇನೂ || ೧ || ಅರಿಯುವೆ ನಿದನೆಂದಾಗಾ | ಮುಂ—ದರಿಯುತ ಸಚಿವನು ಬೇಗಾ || ಪುರದ ಸಮಿಾಪಕೆ ಬರಲೂ | ಜನ—ರರುಹಿದರಾನಂದದೊಳೂ || ೨ || ವಿದುಹಾಸಗೆ ನಲ ವಿಂದಾ | ಶಶಿ—ವದನೆಯ ಸಂಭ್ರಮದಿಂದಾ|| ಮದನನು ಧಾರೆಯನೆರೆದೂ | ರಚಿ—ಸಿದನೈ ಮದುವೆಯನೊಲಿದೂ || ೩ ||

ಮಾರವಿ—ಏಕತಾಳ

ಕಿಡಿಕಿಡಿಯಾದನು| ನುಡಿಯನುಲಾಲಿಸಿ | ಧಡಿಗಖಳಾಧಮನೂ|| ಪೊಡ ವಿಯೊಳೀಪರಿ | ಕಡುಹನು ತೋರ್ದನೆ | ಹುಡುಗನು ತನ್ನವನೂ || ೧ || ಚಿತ್ತದಿ ಗ್ರಹಿಸದೆ | ಪತ್ರದೆ ಸಾರವ | ಮತ್ತವ ಮದುವೆಯನೂ || ಬಿತ್ತರಿಸಿದ ಬಲು | ಧೂರ್ತನು ಸುತನನು | ಕತ್ತರಿಸದೆ ಬಿಡೆನೂ || ೨ || ಹಿತದೊಳು ರಾಜ್ಯವ | ನಾಳುವ ಮನ ವೆನ | ಗತಿಶಯವಾಗಿರಲೂ || ಹತಿಸದೆ ವೈರಿಯ | ಸುತೆಯಳನಿತ್ತನೆ | ಗತಿ ಹೀನನಿಗೆನಲೂ || ೩ || ತೋರಲಮಂಗಲ | ಶಕು ನವ ಲೆಕ್ಕಿಸ | ದೇರಿದ ತುರಗವನೂ|| ಹಾರಿಸಿ ಮುಂದಕೆ | ಕೋಪಾಟೋಪ ದಿ | ಸೇರಿದ ಪುರವನ್ನೂ || ೪ ||

ವಾರ್ಧಿಕ

ಎಲ್ಲಿ ನೋಡಿದೊಡೆ ಭೂಸುರರ ವೇದಧ್ವನಿಗ | ಳೆಲ್ಲಿ ನೋಡಿದೊಡೆ ಭೋರ್ಗರೆಯುತಿಹ ವಾದ್ಯರವ | ವೆಲ್ಲಿ ನೋಡಿದೊಡೆ ಗಾಯನ ನೃತ್ಯ ಗೀತ ಗಳು ಮದನನು ಪೊಗಳುವವರೂ || ಎಲ್ಲಿ ನೋಡಿದೊಡೆ ಶಶಿವದನೆಯರ ಸಂಭ್ರಮಗ | ಳೆಲ್ಲಿ ನೋಡಿದೊಡೆ ದಂಪತಿಗಳಂ ಮನ್ನಿಸುವ | ರೆಲ್ಲಿ ನೋಡಿ ದೊಡೆ ಕೋಲಾಹಲದ ವೈಭವಗಳಿನಿತೆಲ್ಲನಂ ನೋಡಿ ಕನಲೀ || ೧ ||

ಭಾಮಿನಿ

ಆರತಿಯ ತನಗೆತ್ತ ಬಂದಿಹ | ನಾರಿಯರನವಗಡಿಸಿ ಸಚಿವನು | ಸೇರು ತೇಕಾಂತವನು ತರಳನ ಕರೆಯಲವ ಬಂದೂ || ಭೂರಿ ಹರುಷದಿ ತನ್ನ ಪಿತ

ಪದ | ಸಾರಸಕೆ ಮಣಿಯಲ್ಕೆ ಕ್ರೋಧದಿ | ಮಾರಹರ ನಂದದೊಳು ಘರ್ಜಿಸು ತೆಂದನೀ ತೆರದೀ || ೧ ||

ಸೌರಾಷ್ಟ್ರ—ತ್ರಿವುಡೆ

ಏನೆಲವೊ ಮೂಢಾತ್ಮ ನಿನ್ನೆಡ | ಗಾನು ಕಳುಹಿದ ಪತ್ರವನು ಮತಿ | ಹೀನನಾಗಿಯೆ ಮರೆದು ಕಳೆದೆಯೊ | ಯೇನಿದುಸುರೂ || ೧ || ಧುರ ಪರಾ ಕ್ರಮಿ ಚಂದ್ರಹಾಸನು | ಧರೆಯನಾಳಲು ನಿನ್ನ ಗತಿಯೇ | ನರರೆ ನೀನಿದ ತಿಳಿಯದವನಿಗೆ | ತರಳೆಯೆನ್ನೊ || ೨ || ಗಾಢದಿಂದಿತ್ತೀಗ ಕೆಡಿಸಿದೆ | ರೂಢಿಸಿದ ಕಜ್ಜಗಳನೆಲ್ಲವ | ನಾಡಿ ಫಲವೇನಿಹುದುನಮಗತಿ | ಕೇಡ ಬಗೆದೇ || ೩ || ಧರಣಿ ಸುರರಿಗೆ ದಾನಧರ್ಮಗ | ಳಿರದೆ ಮಾಡುತ ಮದುವೆಗಾಗಿಯೆ | ಭರದಿ ವ್ಯಯಿಸಿದೆ ವಿತ್ತವೆಲ್ಲವ | ಮರುಳರಂತೇ || ೪ || ನೋಡದಿರು ನೀನೆನ್ನವದನವ | ನಾಡಿನೊಳಗಿರಬೇಡ ತೆರಳೆಲೊ | ಕಾಡಿಗೆನೆ ವಂದಿಸುತ ಪಿತನನು | ನೋಡಿ ನುಡಿದಾ || ೫ ||

ಸಾವೇರಿ—ಝಂಪೆ

ಕಠಿಣತರ ಮಾತುಗಳ | ಪಿತನೆ ನುಡಿಯುವುದೇತಕೆ | ದಿಟದಿ ಮದು ವೆಯ ಗೈದೆ | ಪತ್ರವನು ನೋಡಿ || ೧ || ಅಂಜದುರೆ ಬಿನ್ನೈಪೆ | ಪೋಪೆ ಕಾನನಕೀಗ | ಮಂಜುಳಾಕರೆಯ ಮದುವೆಯ | ಮಾಡಿದುವಕೇ || ೨ || ರಾಘ ವನ ತೆರದಿಂದ | ಕೀರ್ತಿ ಪಡೆದಪೆನೆನುತ | ಬಾಗಿದನು ಪಿತನಡಿಗೆ | ಕಾಣು ತವಕನಲೀ || ೩ ||

ಶಂಕರಾಭರಣ—ಮಟ್ಟೆ

ತರಳನೆಂದ ನುಡಿಯ ಕೇಳಿ | ದುರುಳ ಸಚಿವನೂ | ಒರೆದನಾಗ ತನ್ನ ಮಾತ | ಮರೆದು ಸುತೆಯನೂ || ಭರದಿ ನಮ್ಮ ವೈರಿಗಿತ್ತು | ಮೆರೆದು ತನ್ನೊ ಳೂ | ಬರಿದೆ ಮಾತನಾಡಬೇಡ | ಸರಸವೆನ್ನಲೂ || ೧ || ನೀತಿಯಲ್ಲ ತಾತ ಲಾಲಿ | ಸಿಂದು ಮುದದೊಳೂ | ಪ್ರೀತಿಯಿಂದ ಪತ್ರದಂತೆ | ನಡೆಯೆ ಖತಿ ಯೊಳೂ || ಯೇತಕೆನ್ನ ಜರೆವೆನಿದರ | ನೀತಿಯರಿಯೆನೂ | ಭೂತಳದಲಿ ನಿನ್ನ ಮಾತ | ಮೀರಿ ನಡೆಯೆನೂ || ೨ || ಎಂದ ಮಾತ ಕೇಳಿ ಸಚಿವ | ನಂದು ಯೋಚಿಸೀ | ಕಂದನೊಡನೆ ಪತ್ರವನ್ನು | ತರಲು ಸೂಚಿಸೀ | ಚಂದದಿಂದ ವಾಚಿಸುತ್ತ ತಿಳಿದ ಮನದೊಳೂ || ಮಂದ ಹಾಸ ಬೀರಿ ತರಳ | ಗೆಂದನಾ

ಗಳೂ || ೩ || ಬರಿದೆ ಜರದೆಕೇಳು ಮಗುವೆ | ತಪ್ಪು ನಿನ್ನೊಳಾ | ಗಿರದು ಮೋಸವಾಯ್ತು ದೈವ | ಕೃತವು ಬೇರೆಲಾ || ಭರದಿ ವಿಷವನೀಯಬೇಕು ಎಂದು ಬರೆದುದೂ | ಪರಿಕಿಸಲ್ಕೆ ವಿಷಯೆಯೆಂದು ಬೀಳು ಬಂದುದೂ || ೪ || ವಿಧಿಯ ಬರಹದಿಂದಲುಳಿದ ಚಂದ್ರಹಾಸನೂ | ಮುದದಿ ಚಿಂತೆ ಬೇಡವೆನಲು ತೆರಳೆ ಮದನನೂ | ಸುದತಿ ವಿಷಯೆಯನ್ನು ಕೂಡಿ ಬಂದು ಮುಂದಕೇ | ಪದುಳದಿಂದ ಮಣಿದ ಮಂತ್ರಿ ಪಾದ ಪದ್ಮಕೇ || ೫ ||

ಭಾಮಿನಿ

ಹರುಷ ಹೊಂದಿದ ತೆರದಿ ಸಚಿವನು | ಹೊರಗೆ ತೋರಿಸುತವರ ಮನ್ನಿಸಿ | ಭರದೊಳಾಶಿರ್ವದಿಸಿ ನೆನೆದನು ಮನದಿ ಬೇರೊಂದಾ || ತರಳೆ ಪಾಪಿಯ ವರಿಸಿ ಕೆಟ್ಟಳು | ದುರುಳನನು ವಧಿಸದೊಡೆ ಮುಂದಕೆ | ಧರೆಯ ನಾಳುವನೆಂದು ಯೋಚಿಸುತೆಂದನವನೊಡನೇ || ೧ ||

ಸೌರಾಷ್ಟ್ರ—ಅಷ್ಟತಾಳ

ಕೇಳಯ್ಯ ಶಶಿಹಾಸ ನಿನ್ನ ಪ್ರತಾಪವನ್ನೇನನೆಂಬೇ | ನಮ್ಮ—ಬಾಲಕಿ ಯನು ವರಿಸಲಾನಂದ ಧರೆಗಾಯ್ತು ಮುಂದೆ ಕಾಂಬೇ | ಮೂಲೋಕ ವೈಭವ ದತಿಸುಖಗಳನೆಲ್ಲ ವೀರ ನೀನೂ | ತಿಳಿ—ಜಾಲವಲ್ಲಾಡುವೆ ಮಾತೊಂದ ನಿನ್ನೊಳು ಪೇಳಲೇನೂ || ೧ || ನಡುಕಾಡ ಮಧ್ಯದಿ ಮೆರೆಯುತ್ತಲಿಹ ಕಾಳಿ ಗುಡಿಯೊಳಿಂದೂ | ನೀನು—ಮೃಡನರಸಿಯ ಪೂಜೆಯ ಮಾಡುವುದಾಚಾರ ವೆಮ್ಮದೊಂದೂ | ಸಡಗರವನು ತೋರ ಬೇಡ ನೀನೊಬ್ಬನೆ ಪೋಗು ಕಂದಾ | ರವಿ—ಪಡುಗಡಲನು ಸೇರ್ವ ಸಮಯದೊಳೆಂದಾಗ ಸಚಿವನೆಂದಾ || ೨ || ನುಡಿದನು ಶಶಿಹಾಸ ವಿನಯದಿ ಮಂತ್ರಿಯೊಳೊರೆದ ಮಾತಾ | ಎಡರಡಸದ ತೆರದಿಂದ ನಡೆಸುವೆ ದೃಢದೊಳು ಕೇಳು ಖ್ಯಾತಾ | ನಡತೆ ವಿಚಾರಗಳನು ತಾನು ಬಿಡಲಾರೆನೆಂದು ಪೇಳೀ | ಮುಂದೆ—ನಡೆದನು ತನ್ನಯ ಸತಿಯಳ ನೊಡಗೊಂಡು ಹರುಷ ತಾಳೀ || ೩ ||

ವಾರ್ಧಿಕ

ದುರುಳಮತಿಯಾಗ ಕಟುಕರ ಕರೆದು ನೇಮಿಸಿದ | ತರುಣಿಯಸ್ತಮಯ ದೊಳು ಚಂಡಿಕಾಲಯಕೆ ಬಹ | ಪುರುಷನಂ ಸಂಹರಿಸಿ ಬರುವುದಲ್ಲದೆ ಮರೆತು ಹಿಂದಿನಂದದೊಳೆಸಗಲೂ || ತರಿಯುವೆನು ನಿಮ್ಮನೆಂದೊರೆಯಲಾ

ನುಡಿ ಕೇಳಿ| ತೆರಳಿವೆನು ಶಿವನರಸಿಯಿರುವ ದೇಗುಲಕಾಗಿ| ವರ ಚಂದ್ರಹಾಸನಿ ತ್ತಲು ರಮಣಿಯೊಡನೆಂದ ಮಂದಹಾಸವ ಬೀರುತಾ || ೧ ||

ನವರೋಜು—ಆದಿತಾಳ

ಚಂದ್ರಮುಖೀ ಶುಕವಾಣೀ । ಸುಂದರಿ ಸರ್ಪಸುವೇಣೀ || ಇಂದು ಧರಾ ಪ್ರೀತೆಯನೂ । ಚಂದದಿ ಪೂಜಿಸಲಾನೂ || ೧ || ಪ್ರೀತಳೆ ಕೇಳೀ ತೆರದೀ । ಖ್ಯಾತೆಯ ಪೂಜಿಸಿ ಮುದದೀ|| ಓತು ನಿನ್ನೆಡೆಗಾನೂ| ಪ್ರೀತಿಯೊಳೀ ಗಲೆ ಬಹೆನೂ || ೨ || ಕರುಣಾವಾರಿಧಿ ರಮಣಾ । ಮೆರೆಯುವೆ ಸದ್ಗುಣ ಭರ ಣಾ|| ಬರುವೆನು ನಿನ್ನೊಡ ನಾನೂ । ಮರೆಯುವೆಯಾ ತನ್ನವನೂ || ೩ || ಶರಜದಳಾಂಬಕಿ ಕೇಳೂ । ಬರುವೆನು ಯಿ ಕ್ಷಣ ತಾಳೂ || ಮರೆಯೆನು ನಿನ್ನನು ರಮಣಿ । ನಾರಿಮಣೀ । ಕಲ್ಯಾಣೀ || ೪ || ||೭೯||

ಕೇದಾರಗೌಳ—ಅಷ್ಟತಾಳ

ರತಿಪತಿಹತ ಮಿತ್ರ | ನತಿಶಯ ಪದಗಳ । ಚತುರ ಪೂಜಕನಾದ । ಪ್ರತುಳ ಪರಾಕ್ರಮಿ । ಮತಿಯುತ ಮಮಕಾಂತನೇ । ನಿನ್ನೊಳು ಪೇಳ್ವೆ—ಹಿತ ವೇನೊ ಗುಣವಂತನೇ | ತೊರೆಯುತಲೆನ್ನ—ಸತತ ಪೋಪೆಯೊ ಶಾಂತನೇ । ದಾತನೆಕೇಳು—ಪಿತನಾಣೆ ನಿನ್ನಯ ಜೊತೆಗೂಡಿ ಬಹೆನಾನು || ೧ || ದೃಢದಿ ನಾನೆಂಬುವ । ನುಡಿಯ ಲಾಲಿಸಿಕೇಳು । ಮೃಡನರಸಿಯ ಪೂಜೆ । ಸಡಗರದಲಿ ಮಾಡಿ । ಮಡದಿರನ್ನೆಯೆ ಬಪ್ಪೆನೂ । ನೀನಿದಕಾಗಿ—ಕಡು ತಾಪಗೊಳುವು ದೇನೂ । ಸತ್ಕರ್ಮವ—ನಡೆಸಿದ ಮನುಜ ತಾನೂ । ಪಾವನನಪ್ಪ—ಜಡಜ ಗಂಧಿನಿ ನೇಮ | ಕೊಡಲು ನಾಪ್ಪೋಪೆನೂ || ೨ || ಪುಂಡುದೈತ್ಯರ ಶಿರ | ತುಂಡಿಸಿ ಮೆರೆದ ಶ್ರೀ । ಪುಂಡರಿಕಾಕ್ಷಿ ಭೂ । ಮಂಡಲಾರ್ಚಿತೆಸುರ । ತಂಡ ಸೇವಿತೆ ದೇವಿಯಾ | ಪೂಜೆಯ ಕೈ—ಕೊಂಡೆನೀ ಪ್ರಾಣಪ್ರಿಯಾ | ಸಂತಸ ವಾಂತೆ | ಚಂಡಿಕೆನಗಜಾತೆಯಾ | ಕಾಂಬೆನುಕರ—ಕೊಂಡು ನೀನೆನ್ನನು । ಖಂಡಿತ ಪೋಗು ಜೀಯಾ || ೩ || ಮಡದಿ ಕೋಮಲೆ ಕೇಳು । ಬಿಡದೀಗ ನಿನ್ನನಾ | ನೊಡಗೂಡಿ ಪೂಜೆಗೆ | ಬೆಡಗಿಂದ ಪೋಗಲು | ಕಡುಗಲಿ ಸಚಿವೇ ಶನೂ | ಸಿಟ್ಟನು ಮಾಡಿ—ಮಿಡನಂತೆ ಕೋಪಿಪನೂ । ನೀನರಿಯೆಯಾ— ನುಡಿದಿರ್ದ ವಚನವನೂ । ಎಂದೆನುತಲಿ—ಪೃಡುರಾಜಾನನೆಯತಾ | ನೊಡನೆ ಸಂತವಿಸಿದಾ || ೪ ||

ವಾರ್ಧಿಕ

ಸಾರತರವಾದ ಮಾತುಗಳಿಂದ ರಮಣಿಯಳ | ನೋರಂತೆ ಸಂತವಿಸಿ ಶಿವೆಯ ಪೂಜಿಸಲೆಂದು | ಧೀರ ಶಶಿಹಾಸ ಗಂಧಾಕ್ಷತೆಗಳಂ ತರಿಸಿ ಭರದಿ ಮುಂದರಿಯಲಿತ್ತಾ || ತೋರಿದುದು ತಲೆಯಿಲ್ಲದಿಹ ಶರೀರಚ್ಛಾಯೆ | ಧಾರಿಣಿಪ ವೀರಸೇನನಿಗದಂ ಕಂಡವಂ | ಭೂರಿ ಚಿಂತೆಯ ತಾಳಿದ್ವಿಜ ಶಿರೋಮಣಿ ಗಾಲವಂ ಗರುಹಲವನೆಂದನೂ || ೧ ||

ಕೇತಾರಗೌಳ—ಝಂಪೆ

ಧರಣಿಪತಿ ಲಾಲಿಸಿನ್ನೂ | ನಿನ್ನೊಳಾ—ನೊರೆಯುವೀ ಸಂಗತಿಯನೂ || ಮರಣ ಬೇಗದಿ ಬರುವುದೂ |-ನಿನಗೆ ಭೂ—ವರನೆ ಶಕುನದ ಫಲವಿದೂ || ೧ || ಧರಣಿಸುರ ಲಾಲಿಸಯ್ಯಾ | ನಾನೊಲ್ಲೆ—ತಿರೆಯ ಪಟ್ಟವನು ಜೀಯಾ|| ಹರಿಯ ನೆನೆಯುವೆ ವನದೊಳೂ | ಚಿಂತೆಯೊಂ—ದಿರುವುದೆನ್ನಯ ಮನದೊಳೂ || ೨ || ಪರಮ ಪೂಜ್ಯನೆ ಸುತೆಯಳಾ | ಪ್ರಾಯದೊಳು—ಭರಿತಳಾಗಿರುವಳವಳಾ || ವರಿಪ ಗುಣನಿಧಿಯಾವನೂ | ತನಗರುಹು—ಕರುಣ ನಿಧಿಯೈಸೆ ನೀನೂ || ೩ || ಹರಿಭಜಕ ಶಶಿಹಾಸನೂ | ನೀನವಗೆ—ತರಳೆ ಸಹಿತಲಿ ಧರೆಯನೂ || ತ್ವರಿತದಿಂದೀವುದೆಂದೂ | ಪೇಳಲದ—ಧರಣಿಪತಿ ಕೇಳುತಂದೂ || ೪ || ಸಚಿವ ಕುವರನ ಕರೆಯುತಾ | ಭೂಪತಿಯು—ವಚಿಸಿದನು ಹರುಷಗೊಳುತಾ || ಶುಚಿಯಾದ ಶಶಿಹಾಸನಾ | ಕರೆದುತಾ—ರುಚಿತದಿಂದೀಗಲವನಾ || ೫ ||

ಭಾಮಿನಿ

ಧರಣಿಪತಿ ಕೇಳಾಗ ಮದನನು | ದೊರೆ ಸಿರೂಪವ ಹೊಂದಿ ತುರಗವ | ಹರಿಸಿದನು ಹರುಷದಲಿ ಮುಂದಕೆ ಹರಿಯ ವೇಗದಲೀ || ಭರದಿ ಮುಂದರಿಯುತಿರೆ ತಡೆದಾ | ಹರಿಭಜಕನೊಡನೆಂದ ಭೂಪತಿ | ಯರುಹಿದನು ನೀ ತೆರಳು ನೃಪನಿದ್ದೆಡೆಗೆ ವಹಿಲದಲೀ || ೧ || ||೩೦೯||

ನವರೋಜು—ಏಕತಾಳ

ಲಾಲಿಪುದೂ ಭಾವಯ್ಯಾ | ನೀ—ಪೇಳುದೇನದನರಿಯಾ | ಲೋಲನಯನೆಶಿವೆ | ಯಾಲಯಕಾಗಿಸು | ಶೀಲೆಯ ಪೂಜೆಗೆ | ಲೀಲೆಯೊಳ್ಪೋಗುವೆ || ಲಾಲಿಪುದೂ || ೧ || ಧರಣಿಪತೀ ಯರುಹಿದನೂ | ನೃಪ—ವರನೆಂದಾ

ಕಾರ್ಯವನು ಭರದೊಳು ವಿರಚಿಸ । ದಿರಲಿದೆ ಪಾತಕ । ವರೆಯುವದೇನನು । ತೆರಳೆಲೊ ಶೀಘ್ರದಿ ॥ಧರಣಿಪತೀ ॥ ೨ ॥ ನಿನ್ನಯ ತಾತನ ಮಾತಾ । ಮೀರ—ಲೆನ್ನುವ ನೇನನೊಖ್ಯಾತಾ । ಎನ್ನಲು ಮದನನು । ಸನ್ನುತ ಪೂಜೆಗೆ। ಯಿನ್ನರೆ ತೆರಳುವೆ । ನನ್ನಿಯೆಂದರಿತುಕೊ ॥ ನಿನ್ನಯ ॥ ೩ ॥

ವಾರ್ಧಿಕ

ಮದನನೀಪರಿಯಿಂದಲರುಹಿ ತುರಗವನಿತ್ತು । ಪದುಳದಿಂ ತೆರಳಿದನು ಚಂಡಿಕಾಲಯಕಾಗಿ । ಪದುಮದಳ ನೇತ್ರೆ ಕೋಮಲ ಗಾತ್ರೆ ಶಿವನರಸಿ ಶಂಕರಿಯ ನೆನೆಯುತವನೂ ॥ ಮುದದಿ ಮುಂದರಿಯುತಿರೆ ಗಂಧ ಪುಷ್ಪದ ಪಾತ್ರೆ। ಯದು ಬೀಳೆ ಮೇದಿನಿಗೆ ಬಳಿಕ ಚಿಂತಿಸಿ ಮನದಿ । ವಿಮುಹಾಸಗಿದರಿಂದ ಬರದಿರಲಿ ಕಷ್ಟಗಳು ಯೆನುತ ಪೊಗಲಾಗಖಳರೂ ॥ ೧ ॥

ಭಾಮಿನಿ

ದುರುಳ ಮತಿಯೊರೆದಂತೆ ತುಂಡಿಸಿ । ತೆರಳಿದರು ಬಳಿಕವರು ಸಂತಸ । ಶರಧಿಯೊಳಗೋಲಾಡಿ ದೊರೆಯನು ಕಂಡು ಶಶಿಹಾಸಾ ॥ ಚರಣಕೆರಗಲು ಹರಸಿ ಭೂಪತಿ । ಭರದೊಳುಚಿತಾಸನವನೇರಿಸು । ತಿರದೆ ನಯ ವಚನದೊಳು ನುಡಿದನು ಕುಂತಳಾಧಿಪನೂ ॥ ೧ ॥ ॥೩೧೪॥

ರೂಪಕ (ಬಂದು ಬಹಳ ದಿವಸ—ಎಂಬಂತೆ)

ಮಾತ ಕೇಳು । ಭೀತಿ ರಹಿತ । ನೀತಿಯಿಂದಲೀ । ಭೂತಳವನು । ಜಾತೆ ಸಹಿತ । ಪ್ರೀತಿಯಿಂದಲೀ ॥ ದಾತನಿನಗಿ । ನ್ನೀತು ಕೊಡುವೆ । ರೀತಿಯಿಂದಲೀ । ಜಾತಿವೀರ । ನೀತಿಯುತನೆ । ಸಾತಿಶಯದಲೀ ॥ ೧ ॥ ಹರುಷದಿಂದ । ತರಳೆ ಸಹಿತ । ಧರೆಯನಾಳಲೂ । ಭರದಿ ಪೋಗಿ । ಹರಿಯ ನೆನೆಯು । ತಿರುವೆ ವನದೊಳೂ ॥ ತೊರೆವೆ ಸಕಲ । ತಿರೆಯ ನಿನ್ನ । ಯಿರವ ನರುಹಲೂ । ವರಿಪೆ ಮುಕ್ತಿ । ಹರಿಯ ನೆನೆದು । ಭರದೊಳೆನ್ನಲೂ ॥ ೨ ॥ ನುಡಿದ ಮಾತ । ನಡೆಪೆನೆನ್ನು । ತೊಡನೆ ಪೇಳುತ । ಪೊಡವಿ ಸುರರ । ಗಡಣವನ್ನು । ಬಿಡದೆ ನಮಿಸುತ । ತಡೆಯದಾಗ । ಪೊಡವಿಪಾಲ । ನಡಿಗೆ ಯೆರಗುತ । ಒಡೆಯ ಹರಿಯ । ಬಿಡದೆ ನೆನೆದು । ಕಡುಹುಗೊಳ್ಳುತ ॥ ೩ ॥ ತರುಣಿಯುಳನು । ವರಿಸಿ ಪಟ್ಟ । ವೇರಲವನನೂ ॥ ಕರೆದು ನೀತಿಯುರುಹಿ ಭೂಪ । ತೆರಳಿ

ಪೋದನೂ ॥ ಮರಣ ತಪ್ಪಿ । ತಿರೆಯುದೊರಕ । ಲೊರೆವೆನೇನನೂ ॥ ಹರುಷ ದಿಂದ । ಸುರಪ ಕರೆದ । ನರಳ ಮಳೆಯನೂ ॥ ೪ ॥

ಭಾಮಿನಿ

ಮೆರೆವ ಗೋಧೂಳಿಯ ಸುಲಗ್ನದಿ । ತರಳೆ ಚಂಪಕ ಮಾಲಿನಿಯು ಗಂ । ಧರುಹ ವೈವಾಹದಲಿ ವರಿಸುತ ಪಟ್ಟವೇರಲ್ಕೇ ॥ ಮೆರೆವ ಸಂಸಾರವನು ತೊರೆ ಯುತ । ಧರೆಯಧಿಪ ಗಾಲವನ ಮತದೊಳು । ತೆರಳೆ ಕಾನನಕಾಗ ರಮಣಿ ಯೊಳೊರೆದ ಶಶಿಹಾಸ ॥ ೧ ॥

ಬೇಗಡೆ—ಮಿಶ್ರಚಾಪು

ಬಾಲೆ ಕೇಳ್ನು । ಶೀಲೆ ಸುಗುಣ । ಮಾಲೆ ಕರುಣಾ । ವಾಲೆ ನಿನ್ನ । ಜಾಲವಲ್ಲ ಕರವ ಪಿಡಿದ । ಮೇಲೆ ಭಾಗ್ಯ ಪಡೆದೆ ಕೇಳು ॥ ೧ ॥ ಸರಸ ಸುಗುಣಯೆನ್ನ ರಮಣ । ವರಿಸಿ ನಿನ್ನ ಸುಖವ ಮುನ್ನ । ಕರುಣ ನಿಧಿಯೆ ಹೊಂದಲೆನ್ನ । ನಿರದೆ ಪೊಗಳ್ವದೇಕೆ ಚೆನ್ನ ॥ ೨ ॥ ಸುಂದರೀ ಕೇಳ್ವಳ್ಳಿ ತಾಯ್ತು । ಮಂದಗಮನೆ ನಿನ್ನ ಮಾತಿ । ನಂದವನ್ನು ತಿಳಿಯೆನಕಟ । ಚಂದಿ ರಾನೆ ಹರಿಣ ನಯನೆ ॥ ೩ ॥ ಅರಿಯದಿರುವ ಗೂಢವನ್ನು । ಒರೆದುದಿಲ್ಲ ಪ್ರೀತ ನಿನ್ನ । ತೆರನ ವೀರರನ್ನು ಕಾಣೆ । ವರಿಸಿ ಕೀರ್ತಿ ಪಡೆದೆ ತಾನೆ ॥ ೪ ॥ ಬಡವನೆನಗೆ ಕುಂತಳೇಶ । ಪೊಡವಿ ಸಹಿತ ನಿನ್ನನೀಯೆ । ಪಡೆದೆನತುಲ ಸಂಪ ದವನು । ಜಡಜಗಂಧಿ ಕೋಮಲಾಂಗಿ ॥ ೫ ॥

ಕಾಂಬೋದಿ—ಝಂಪೆ

ಅರಸ ಚಿತ್ತವಿಸು ನೀ । ನೊರೆದ ಮಾತುಗಳೆನ್ನ । ಕರಕರಿಸು ತಿಹುದ ಕಟಜೀಯಾ ॥ ಸುರನರರಿಗಸದಳದ । ಮೆರೆವ ಕಾರಿಯಗಳಸು । ಧರೆಯೊಳೆಸ ಗಿದೆ ನೀನು ಪ್ರಿಯಾ ॥ ೧ ॥ ನಿನ್ನಂತ ವಿಕ್ರಮರ । ಮುನ್ನ ಹಳಿಯುವು ದುಂಟೆ । ರನ್ನತವ ಕೀರ್ತಿಗಳ ಕೇಳೀ ॥ ಎನ್ನ ಪಿತನಿನಗಿತ್ತ । ಪನ್ನತಿಕೆಯಿಂ ದಲಾ । ನಿನ್ನ ಧನ್ಯೆಯು ಮೂರು ಜಗದೀ ॥ ೨ ॥ ಸಾರಸಾಂಬಕಿ ಕೇಳು ಶ್ರೀರಮಣ । ಮುರಹರನ । ಕಾರುಣ್ಯದಿಂದ ಲೋಕವಲೀ ॥ ವೀರತನಗಳ ತೋರಿ । ಭೂರಿ ದುರುಳರ ಸದದೆ । ಪಾರಮಾರ್ಥದಿ ಕೇಳು ನಿಜದೀ ॥ ೩ ॥ ಎನ್ನಿಂದಲೇನಪ್ಪು । ದಿನ್ನು ಕೇಳೀ ಲೋಕ । ವನ್ನು ನಡೆಸುವನೊಬ್ಬ ಜಾಣಾ ॥ ಚೆನ್ನಿಗನು ತಾನಿಹನು । ಕನ್ನೆ ಕೇಳವನ ಮತ । ವನ್ನು ಮಿಾರಲು ಶಿಕ್ಷಿಸು

ವನೂ ॥ ೪ ॥ ಸಚ್ಚರಿತಪತಿ ನಿಮ್ಮ । ಮುಚ್ಚು ಮರೆಯಿಲ್ಲದಿಹ । ಸ್ವಚ್ಛತರ ವಾದ ನುಡಿಗಳಿಗೇ । ಮೆಚ್ಚಿದೆನು ತವ ಮನಸಿ । ನಿಚ್ಛೆಯಂದದಿ ನಡವೆ । ಹೆಚ್ಚು ಮಾತುಗಳೇಕೆ ನಮಗೆ ॥ ೫ ॥ ನಡಪಕಾರ್ಯವ ಬೆಸಸಿ । ರೊಡನೆ ನೀವೆಂದೆನುತ । ಲಡಿಗೆರಗೆ ಪ್ರೀತಿ ಭಾವದಲೀ ॥ ಮಡದಿಯಳ ಪಿಡಿದೆತ್ತಿ । ಸಡಗರದಿ ಮುದ್ದಿಸುತ । ನುಡಿದನಿಂತೆಂದು ಮಮತೆಯಲೀ ॥ ೬ ॥

ಭಾಮಿನಿ

ಇಂದು ಹಾಸನು ತನ್ನ ಸತಿಯೊಡ । ನೆಂದ ಪುರಜನರರಿಯುವಂದದೊ । ಳಿಂದು ಮೆರವಣಿಗೆಯನು ಮಾಡಲು ಬೇಕು ಹರುಷದಲೀ ॥ ಎಂದವಳೊ ಳೊಪ್ಪಿಗೆಯ ಪಡೆದಾ । ನಂದಕಂದನ ನೆನೆದು ಮನದೊಳು । ಮುಂದರಿದು ಗಜವಡರಿ ಬರಲಾ ಕುಮತಿಯನು ನೋಡಿ ॥ ೧ ॥

ಕೇತಾರಗೌಳ—ಝಂಪೆ

ಅಡಿಗೆರಗಲವನ ನೋಡೀ । ಕ್ರೋಧದೊಳು—ನುಡಿದನಾ ಸಚಿವ–ಖೋಡೀ । ಕಡು ಖೂಳ ನೀನು ಜಗದೀ । ಮಮ ವಚನ–ಕೆಡಿಸಿದೆಯ ಮದ ಗರ್ವದೀ ॥ ೧ ॥ ಧರೆಯೊಳಗೆ ಶಿವ ಪೂಜೆಯಾ । ವಿರಚಿಸುವ—ಭರಿತ ಪದ್ಧತಿ ಮರೆತೆಯಾ । ದುರುಳ ನೀ ಬಗೆದುದೇನೂ । ನಿನ್ನ ಮನ—ದಿರವನೀಗಲೆ ತಿಳಿದೆನೂ ॥ ೨ ॥ ಘನಪರಾಕ್ರಮಿಯೆನ್ನುತಾ । ಗರ್ವದೊಳು—ಮರತೆಯಿದಕೇಳು ಧೂರ್ತಾ । ದುರಿತವನುಗಳಿಸಿ ನೀನೂ । ಹೀಗಿರಲು–ಮೆರೆದಪೆಯ ಪೇಳಲೇನೂ ॥ ೩ ॥ ತರಳೆ ನಿನ್ನನು ವರಿಸುತಾ। ಕೆಟ್ಟಳಿಂ—ದೊರೆಯಲದ ಕೇಳುತೀತಾ । ದುರುಳಮತಿಯೊಡನೊರೆದನೂ । ಶ್ವಶುರನೀ–ಧರಿಸಲೇತಕೆ ಖತಿಯನೂ ॥ ೪ ॥ ನಿನ್ನ ಮನದಂತೆ ನಾನೂ । ಶಿವನರಿಸಿ—ಯನ್ನು ಪೂಜಿಸೆ ಪೋದೆನೂ । ಸನ್ನುತನೆ ಕೇಳಾಗಲೂ । ಮದನ ಬಂ–ದೆನ್ನೊಳರುಹಿದ ಮುವದೊಳೂ ॥ ೫ ॥

ವಾರ್ಧಿಕ

ದೊರೆ ನಿರೂಪವನುಸುರಿ ಚಂಡಿಕಾಲಯಕಾಗಿ । ತೆರಳಲಾಮದನ ಮುಂದರಿದು ಬರಲೆನದಿರದೆ । ತರಳೆ ಸಹಿತಲಿ ಧರೆಯನುಂ ಕೊಟ್ಟು ಕಾನನಕೆ ತೆರಳಿದಂತಿರೆಯಧಿಪನೂ ॥ ಪುರಜನರಿಗರಿಯಲೆಂದಿರದೆ ಮೆರವಣಿಗೆಯೊಳು । ಪೊರಮಟ್ಟಿವದರಿಂದ ಧರಿಸಲಾಗದು ಖತಿಯ । ದುರಿತಲವವೆನಗಿಲ್ಲ ಜರೆಯ ಬೇಡೆಂದು ಪದಕೆರಗಿ ನರಿದನು ಮುಂದಕೇ ॥ ೧ ॥

ಭಾಮಿನಿ

ಹರಿಭಜಕನೊರೆದುದನು ಕೇಳುತ । ಮರುಗಿಬಹು ವಿಧದಿಂದ ಸಚಿವನು । ತರಳನಿರವನು ತಿಳಿಯಲೆಂದಾನಿಶಿಯ ಕಾಲದಲೀ ॥ ಪೊರಟು ಕಗ್ಗತ್ತಲೆಯೊಳೆಡವುತ । ಲಿರದೆ ಬೀಳುತ್ತೇಳುತತಿಶಯ । ಕೊರಗಿ ಪುರುಳರ ತೆರದಿ ಪೋಪನ ಕಂಡು ಪ್ರೇತಗಳೂ ॥ ೧ ॥

ಘಂಟಾರವ—ಏಕತಾಳ

ತಡೆಯದೆ ಪೋಪನ ಕಂಡೂ । ಪ್ರೇತ—ಗಡಗಣಗಳುರೆಮುಂಕೊಂಡೂ ॥ ಘುಡು ಘುಡಿಸುತ್ತ ಮುಂದರಿದೂ । ದಾರಿ—ಹಿಡಿದಿಹ ಸಚಿವನ ತಡೆದೂ ॥ ೧ ॥ ಪರಿಕಿಸಿ ತಿಳಿಯುತ ಮನದೀ । ಹಿಂದೆ—ಸರಿಯುತ ನುಡಿದವು ಜವದೀ ॥ ಭರಿತ ಪಾಪಗಳನು ಮಾಡೀ । ಮೆರೆ—ದಿರುವ ಕುಬುದ್ಧಿಯ ನೋಡೀ ॥ ೨ ॥ ಪಾತಕಿಯಿವನಹುದೆಂದೂ । ಬಲು—ಭೀತಿಯ ತಳೆಯುತ ನೊಂದೂ ॥ ಪ್ರೇತಗಳೆಲ್ಲವು ಸರಿಯೇ । ಮಂತ್ರಿ—ಕಾತುರದೊಳು ಮುಂದರಿಯೇ ॥ ೩ ॥

ವಾರ್ಧಿಕ

ಸುಡುಗಾಡೊಳೀ ತೆರದಿ ಚೇಷ್ಟೆಯಂ ವಿರಚಿಸಲು । ಕಡುನೊಂದ ಸಚಿವನದನರಿಯದವನಾಗಿ ಮುಂ । ದಡಿಯಿಡುತ ಬೇವಕುಣಪದ ಚಿತಿಯೊಳುರಿವ ಕಾಷ್ಟಂಗಳಂ ತೆಗೆದುಕೊಂಡೂ ॥ ಮೃಡನರಸಿಯಾಲಯವ ಪೊಕ್ಕದರ ಬೆಳಕಿನೊಳು । ಮಡಿದು ಬಿದ್ದಿರುವ ಸುತವರಸನುಂ ಕಂಡಾಗ । ಲಡಿಗಡಿಗೆ ಚಿಂತಿಸುತ ಕುಮತಿಯುರೆ ಮರುಗಿದಂ ಕಲ್ಮರಂ ಕರಗುವಂತೇ ॥ ೧ ॥

ನೀಲಾಂಬರಿ—ರೂಪಕ

ಹರಹರ ಯಾರಿಗೆ ಪೇಳಲಿ । ದೊರಕಿವ ಕಷ್ಟಗಳೆಲ್ಲವ ॥ ಪರಿಹರಿಪವರನು ಕಾಣೆನು । ಧರೆಯೊಳು ಚೋದಿಗವೂ ॥ ಪಲ್ಲ ॥ ಗತಿ ಹೀನನು ಶಶಿಹಾಸನು । ಪೃಥುವಿಯನಾಳಲು ಮುಂದಕೆ ॥ ಕ್ಷಿತಿ ದೊರೆಯದು ತರಳರಿಗೆಂ । ದತಿಶಯ ಮಮತೆಯಲೀ ॥ ಸುತನಿಗೆ ಪತ್ರವ ಬರೆದುದು । ಹಿತವಾಗಿಯೆ ಪರಿಣಮಿಸಿತು ॥ ಸುತೆಯನು ವರಿಸಿದ ಹೇಪಶು । ಪತಿ ಪೇಳುವುದೇನೂ ॥ ಹರಹರ ॥ ೧ ॥ ಪರಮಾತ್ಮನ ನೆಲೆಯರಿಯದೆ । ತರಳನ ಕೊಲಿಸಿದೆ ಸುಮ್ಮನೆ । ಭರಿತದಿ ಪಾತಕ ಗಳಿಸಿದೆ । ಧರೆಯೊಳು ಶಿವಶಿವನೇ ॥ ತಿರೆಯನುರರು ತನ್ನೊ

ಡನತಿ । ಹರುಷದಿ ಪೇಳಿದ ನುಡಿಗೆಡ । ಧರುವುದೆಲೋಕದಿ ತಿಳಿಯದೆ । ಮರುಳನು ತಾನಾದೇ || ಹರಹರ || ೨ || ಯಾತಕೆ ಪೂಜೆಗೆ ಕಳುಹಿದೆ । ನ್ಯಾತಕೆ ಮದನನು ತಡೆದನಿ । ನ್ಯಾತಕೆ ದೇಗುಲಕೈದಿದ । ಭೂತೇಶನೆ ಬಲ್ಲಾ || ಯಾತಕೆ ಕಟುಕರು ಕೊಂದರು | ಯಾತಕೆ ರಾಜ್ಯವ ಭೂವರ । ನೀತನಿಗಿತ್ತನು ಶಿವವಿಪ । ರೀತವೊದಗಿತಲ್ಲಾ || ಹರಹರ || ೩ || ಕಂದನೆ ಹಾಸುಗುಣಾರ್ಣವ । ಚಂದಿರಯೆನ್ನೊಳು ಮುನಿಸನು । ಹೊಂದಲು ಭುವಿಯೊಳು ಬಾಳ್ವೆನೆ । ಸುಂದರ ಸುಕುಮಾರಾ || ಬಂದನು ತಂಗಿಯ ಸಂಗಡ । ಚಂದಿರಹಾಸನು ಮನ್ನಿಸು | ಹಿಂದಿನ ವಿಷಯವ ನೆನೆಯದಿ । ರೆಂದವನಳಲಿದನೂ || ಹರಹರ || ೪ || ಧರೆಯೊಳು ಪರರಿಗೆ ಕೇಡನು | ತರಲುರೆಯತ್ನಿಪ ಮರುಳಗೆ | ಬರುವುದು ಕಷ್ಟಗಳದರನು । ಪರಿಹರಿಸುವರಿಹರೆ || ಹರಿ ಭಜಕನ ಶಶಿಹಾಸನ । ಮರೆಯೊಳು ಹತಿಸಲು ಬಗೆದುದ । ಪರಶಿವ ಮೆಚ್ಚದ ಕಾರಣ | ತರಳನ ಗತಿಯಾಯ್ತೂ || ೫ || ||೩೪೭||

ಭಾಮಿನಿ

ಎಂದು ನಾನಾ ತೆರದಿ ಚಿಂತಿಸಿ । ಕಂದನನು ಕೊಂಡಾಡಿ ಸಚಿವನು । ಮುಂದೆ ಬದುಕುವ ರೀತಿಯರಿಯದೆ ನೊಂದು ಬಸವಳಿದೂ ||—ಚಂದಿರಾನನೆ ದೇವಿಯನು ನೆನೆ । ದಂದು ಕಂಭವಪಾಯುಲವನಸು । ಹೊಂದಿದುದು ಯಮಪುರವ ಪೇಳುವೆ ಕೇಳು ಮುಂಗತೆಯಾ || ೧ ||

ತೋಡಿ—ಅಷ್ಟತಾಳ

ಬಂದ ಪೂಜೆಯ ವಿಪ್ರನು ದಯದಿ । ಚಂದಿರಾನನೆ ಶಿವೆಯನರ್ಚಿಸ । ಲೆಂದವನು ದೇಗುಲವ ಹೊಕ್ಕಾಗಾ || ತಂದೆಮಗಸಹಿತಂದು ಮರಣವ | ಹೊಂದಿರುವ ಪರಿಯರಿತು ಮನದಲಿ | ನೊಂದುಕೊಂಡವನಾಗಿ ಬಲುಬೇಗಾ || ೧ || ಒರೆಯುವೆನು ದೊರೆವರೆಗೆ ಸಂಗತಿ | ದುರುಳರಾರೋ ಕೊಂದರಿವರನು | ಹರಹರಾ ಬಲುಕಷ್ಟವೆಂದವನೂ || ಭರದೊಳರಮನೆ ವರೆಗೆ ಬಂದಾ । ಧರೆಯುಮರಬಾಗಿಲಲಿ ರೋಧಿಸ । ಲರಿದು ಮನದೊಳು ಬಳಿಕ ಭೂಧವನೂ || ೨ || ಧರಿಸುತಾಶ್ಚರ್ಯವನು ಬೇಗನೆ । ತೊರೆದು ನಿದ್ದೆಯನೆದ್ದು ಬಂದವ । ನರುಹಿದನು ವಂದಿಸುತ ವಿಪ್ರನನೂ || ಪರಮ ಪೂಜ್ಯರು ನೀವು ಮನದೊಳು । ಕೊರಗಿ ಬೆಂಡಾಗಿರುವಿರೇತಕೆ | ಕರುಣವೊಳಗವನರುಹಿರೆನಲವನೂ || ೩ ||

ಕಾಂಬೋಧಿ—ಝಂಪೆ

ನಡನಡುಗುತಿದೆ ಮುಂದೆ | ನುಡಿವೆನೆಂದರೆ ಗಂಟ | ಲಿಡೆಯೊತ್ತಿದಂತೆ ನಗೆ ದೊರೆಯೇ || ಕಡುಕಷ್ಟ ತೋರುತಿದೆ ಕೈಕಾಲು ನಡುಗುತಿದೆ | ಒಡಲೊಳು ರಿಪುಟ್ಟುತಿದೆ ದೊರೆಯೇ || ೧ || ಧರಣಿಪತಿ ರಾಜ್ಯವನು | ತೊರೆದು ಪೋಗಲಿ ಕಿತ್ತ | ದುರುಳರಾರೋ ಬಂದು ದೊರೆಯೇ || ವರ ಚಂಡಿಕಾಲಯದಿ ಸಚಿವ ನನುಸುತಸಹಿತ | ತರಿದು ಪೋಗಿಹರಕಟ ದೊರೆಯೇ || ೨ || ಮಾನನಿಧಿ ನೀಧರೆಯ | ನಾಳುತಿರಲೀ ಪರಿಯ ಹಾನಿ ಮಾಡಿದರಯ್ಯೊ ದೊರೆಯೇ | ಯೇನೆಂಬುವರಿಯೆನಿದ | ಕೇನ ಮಾಡುವದಿನ್ನು | ದಾನವಾಂತಕ ಬಲ್ಲ ದೊರೆ ಯೇ || ೩ ||

ವಾರ್ಧಿಕ

ಧರೆಯಮರ ನೊರೆದುದಂ ಕೇಳ್ದಧಿಕ ಚಿಂತೆಯಿಂ | ಕರಗಿ ಕಾತರಿಸಿ ಬಹು ಪರಿಯಿಂದ ಶಶಿಹಾಸ | ಭರದಿ ಪೊರಟೈದಿದಂ ಚಂಡಿಕಾಲಯಗಾಗಿ ವಿಪ್ರ ಸಹಿತಾಕ್ಷಣದಲೀ || ವರ ಬಂಧು ಬಳಗ ಕಾಮಿನಿಯರೀ ವಾರ್ತೆಯಂ | ನೆರೆ ತಿಳಿದು ಮುಂದರಿದು ದೇಗುಲವ ನುರೆ ಸೇರಿ | ಪರಿಪರಿಯ ಚಿಂತೆಯಿಂ ಬಳಲಿ ಬಾಯಾರುತಿರೆ ತಡೆದವರೊಳಿಂತೆಂದನೂ || ೧ ||

ಕಾಂಬೋಧಿ—ಅಷ್ಟತಾಳ

ಫುಲ್ಲನಯನೆ ದೇವಿಯನ್ನು | ನಿಲ್ಲದೀಕ್ಷಿಸುತ್ತ ಕಂಗ | ಳಲ್ಲಿ ಜಲವ ಸುರಿಸಿ ಪೇಳ್ದ | ನೆಲ್ಲ ಜನರಿಗೇ || ೧ || ಮಡಿದ ತನ್ನ ಬಂಧುಗಳನು | ಪಡೆವೆನೊಲಿಸಿ ಚಂಡಿಕೆಯನು | ಕೊಡುವೆನಸುವ ಮಾರ್ದೊಡಾನು | ಧೃಢದೊಳವಳಿಗೇ || ೨ || ಮರುಗಬೇಡಿ ಬರಿದೆಯೆಂದು | ಕರೆಸಿ ವಿಪ್ರರನ್ನು ಕ್ಷಣದಿ | ಹರುಷ ದಿಂದ ಯಜ್ಞಕೊಂಡ ವಿರಚಿಸುತ್ತಲೀ || ೩ || ವಿಧಿ ವಿಧಾನದಿಂದಲವಸು | ಪದುಮನೇತ್ರೆಗೊದಗಿ ಹೋಮ | ಪದುಳದಿಂದ ಮಾಡಿಸುತ್ತ | ಮುದದಿ ತನ್ನಯಾ || ೪ || ಬಾಳಿನಿಂದ ದೇಹವನ್ನು | ಸೀಳಿ ಬಲಿಯನಿತ್ತು ಹರನ | ಲೋಲೆಯನ್ನು ಭಜಿಸಿ ಮೆರೆದ | ಪೇಳಲೇನದಾ || ೫ || ||೩೬೦||

ವಾರ್ಧಿಕ

ತಾಯೆ ಮಂಗಳೆ ಪರಮ ಕಲ್ಯಾಣಿ ಶಂಕರನ | ಪ್ರೀಯೆ ಪಾರ್ವತಿನಾಕ ಮುನಿ ನಮಿತೆ ಗಾಯತ್ರಿ | ಮಾಯೆ ಸರ್ವೇಶ್ವರಿ ಜಗನ್ಮಾತೆ ಚಾಮುಂಡಿನೀ

ನಖಿಳ ಲೋಕಶಕ್ತಿ ॥ ಶ್ರೀಯೆ ಮಂಗಳ ಕಾಯೆ ಸಾವಿತ್ರಿ ಶಾರದೆಯೆ । ಕಾಯ ಬೇಕೌ ತನ್ನ ಪೇಳಿ ಫಲವೇನು ನಿರ ॥ ಪಾಯೆ ತನ್ನಸುವ ನಿನಗರ್ಪಿಸುವೆ ನೆಂದವಂ ಖಡ್ಗಮಂ ಕಂಠಕಿಡಲೂ ॥ ೧ ॥

ಭಾಮಿಂನಿ

ಪೊಡವಿಪತಿ ಲಾಲಿಸುವುದಾಗಲೆ । ಮೃಡನರಸಿ ಮೆಚ್ಚುತಲಿ ಭಜಕನ । ದೃಢತರಕೆ ಪ್ರತ್ಯಕ್ಷಳಾಗುತ ಸೆಳೆದು ಖಡ್ಗವನೂ ॥ ಸಡಗರದಿ ಮೈದಡವಿ ಮೂಜಗ । ದೊಡತಿ ತೋರ್ದಳು ರಾಮಣೀಯಕ । ಜಡಜಭವ ಮುಖ್ಯರುರೆ ಕಾಣದ ರೂಪವನು ನರಗೇ ॥ ೧ ॥

ಶಂಕರಾಭರಣ—ಅಷ್ಟತಾಳ

ಕಂಡನು ಶಿವೆಯ ಮೂರುತಿಯಾ । ನಾರಿ—ತಂಡದಿ ಮೆರೆವ ಕೋಮಲೆಯಾ । ಆದಿ—ಗಂಡನ ಮಡದಿ ಮಂಗಳೆಯಾ । ಸುಪ್ರ—ಚಂಡ ಪ್ರಕಾಶ ಶೋಭಿತೆಯಾ । ರಣ—ಮಂಡಲದೊಳು ದುಷ್ಟ । ಚಂಡ ಮುಂಡರ ಶಿರ । ತುಂಡಿಸಿ ಮೆರೆದ ಶ್ರೀ । ಪುಂಡರೀಕಾಕ್ಷಿಯ ॥ ಕಂಡನೂ ॥ ೧ ॥ ಚಂದ್ರಿಕೆಯಂದದನಗೆಯಾ । ಮುಖ—ಚಂದ್ರನ ಘನತೆ ಸೌಂದರಿಯಾ । ಲೋಕಾ—ನಂದವಾಗಿಹ ಮೈಸಿರಿಯಾ । ನಯ—ನೇಂದ್ರಿಯವೆಸೆಯೆ ತಾವರೆಯಾ । ಎಸ—ಳಂದದಿ ಸಂಭ್ರಮ । ದಿಂದಲಿ ತುಂಬಿಗ । ಳಂದುರೆ ಮುತ್ತಿರೆ । ಸುಂದರ ರೂಪೆಯಾ ॥ ಕಂಡನೂ ॥ ೨ ॥ ಜಗದಂಬೆ ಪಟ್ಟೆಯನುಟ್ಟೊ । ಮೈಗೆ—ಸೊಗಸಾದ ಕುಪ್ಪಸ ತೊಟ್ಟೊ । ಬಗೆ—ಬಗೆಯಿಂದ ತೊಡವುಗಳಿಟ್ಟೊ । ಹರಿ—ಭಗಿನಿಯಾನಂದವ ಪಟ್ಟೊ । ಬಿರಿ—ಮುಗುಳಾದ ಪೂಗಳ । ಮಿಗೆ ತನ್ನಕಬರಿಯೊ । ಳೊಗುಮಿಗೆ ಪ್ರೇಮದಿ । ನಗಜಾತೆ ಧರಿಸಿರೆ ॥ ಕಂಡನೂ ॥ ೩ ॥ ಹರಿಹರ ಬ್ರಹ್ಮಾದಿಗಳನೂ । ಸುರ—ರುರುಗ ಕಿನ್ನರ ಗರುಡರನೂ । ಮೇರು—ಗಿರಿ ಮೊದಲಾಗುತೆಲ್ಲವನೂ । ಮೆರೆ—ದಿರುವ ಚರಾಚರಗಳನೂ । ಸರ್ವ—ಶರಧಿ ಲೋಕಂಗಳ । ಧರಿಸುತಾನಂದದಿ । ಪೊರೆಯುವ ದೇವಿಗೆ । ಶರಣೆನುತೆರಗಿತಾ ॥ ಕಂಡನೂ ॥ ೪ ॥

ಭಾಮಿಂನಿ

ಅಡಿಗೆರಗಿ ಭಯ ಭರಿತ ಭಕ್ತಿಯೊ । ಳಡಿಗಡಿಗೆ ಕೊಂಡಾಡಿ ದೇವಿಯ । ಬಿಡದೆನುತಿಸುತಲಿರುವ ಭಜಕನ ಶಿರವ ಪಿಡಿದೆತ್ತೀ ॥ ಕಡು ಕರುಣ ರಸವೊಸ

ರಲವನೊಳು । ನುಡಿದಳಿಲೆ ನಿನಗಾನು ಮೆಚ್ಚಿದೆ । ಕೊಡುವೆ ಬೇಕಾದೆರಡು ವರಗಳ ಕೇಳಿಕೋ ಮಗನೇ ॥ ೧ ॥

ಘಂಟಾರವ—ಏಕತಾಳ

ಪಾಲಿಸು ಶಂಕರಿಯೇ । ಗುಣ–ಮಣಿಯೇ ॥ ಪಲ್ಲ ॥ ಪಾಲಿಸು ಶಂಕರಿ । ವೈರಿ ಭಯಂಕರಿ । ಲೋಲ ನಯನೆ ಸು । ಶೀಲೆಯೆ ತನ್ನನು ॥ ಅನುಪಲ್ಲ ॥ ಚಿತ್ತಜ ಹರನರಸೀ । ಲೋಕದೊ-–ಳುತ್ತಮೆನೀನೆನಿಸೀ । ದುಷ್ಟರ—ನೊತ್ತುತ ದಯವಿರಿಸೀ । ಭಜಕರ—ವೊತ್ತವನುರೆ ಮೆರಸೀ । ಬಿತ್ತರಿಸುವದೇ । ನಿತ್ತಪೆನೀಕೃಪೆ । ವೆತ್ತತಿವರಗಳ । ಮತ್ತವರಿಗೆ ತಾಯೆ ॥ ಪಾಲಿಸು ॥ ೧ ॥ ನಂಬಿದೆ ಮಹಮಾಯೇ । ತವಪಾದಾಂಬುಜವನು ಕಾಯೇ । ನಿಟ– ಲಾಂಬಕ ಸುಪ್ರೀಯೇ । ಭಕ್ತಕು–ಟುಂಬಸಂರಕ್ಷಿತೆಯೇ । ಶುಂಭನಿಶುಂಭರ । ಸಂಭ್ರಮ ದಲಿ ತರಿ । ದಿಂಬಸು ನೀನಿತ್ತೆ । ನಂಬಿದಜನರಿಗೆ ॥ ಪಾಲಿಸು ॥ ೨ ॥ ನಿನ್ನನು ನೆನೆವವನೂ । ಹೊಂದುವ—ನುನ್ನ ತಪದವಿಯನೂ । ಮಾತೆಯೆ-–ಮನ್ನಿಸು ತನ್ನುವನೂ । ಬೇಡುವೆ—ನಿನ್ನಾವರಗಳನೂ । ಎನ್ನುತ ಪಾದಗ । ಳನ್ನವ ಪಿಡಿಯಲು । ಮನ್ನಿಸುತವನೊಳು । ಸನ್ನುತೆ ನುಡಿದಳು ॥ ಪಾಲಿಸು ॥ ೩ ॥

ಶಂಕರಾಭರಣ-–ತ್ರಿವುಡೆ

ವೀರ ವಿಕ್ರಮಿಯಹುದು ನಿನಗೆಣೆಯಾ । ನಾಕಾಣೆ ಲೋಕದಿ—ಪಾರ ಮಾರ್ಥದಿ ನುಡಿವೆನೀಪರಿಯಾ । ಧೀರತನಗಳನಾರುಮಾಳ್ಪರು ಧಾರಿಣಿಯೊಳಕಟಕಟ ಸುಮ್ಮನೆ । ಭೂರಿ ಬಳಲಿದೆ ಮಗುವೆ ನಿನ್ನವಿ । ಚಾರವಾವುದು ಪೇಳುತನಗದ ॥ ವೀರ ವಿಕ್ರಮಿ ॥ ೧ ॥ ಹರಿ ಭಜಕ ನೀನೆಂದು ಭೇದವನೂ । ನಾಗ್ರಹಿಸೆ ಚಿತ್ತದಿ—ಮರುಗಲೇತಕೆ ಬರಿದೆ ನೀನಿನ್ನೂ । ಸಿರಿವರನ ಪೂಜಿಪರು ತನ್ನಯ । ಕರುಣೆಗೊಳಗಾಗುವರು ಲೋಕದಿ । ಭರಿತ ವಿಕ್ರಮಿ ನಿನಗೆ ಬೇಕಾ । ಗಿರುವ ವರಗಳಕೇಳು ಮುದದೊಳು ॥ ವೀರ ವಿಕ್ರಮಿ ॥ ೨ ॥ ಎಂದ ಮಾತನು ಕೇಳಿ ತೋಷದೊಳೂ । ಶಶಿಹಾಸ ಕೈ ಮುಗಿ–ದಂದು ದೇವಿಯೊಳೆಂದ ಭಕ್ತಿಯೊಳೂ । ಮುಂದೆ ಪ್ರತಿಜನ್ಮದೊಳು ತನಗರ । ವಿಂದನಾಭನ ಭಕ್ತಿ ದೊರೆಯಲಿ । ಯಿಂದು ಸತ್ತವರೇಳಲಿದನಾ । ನಂದದೊಳು ದಯಪಾಲಿಸೆನ್ನಲು ॥ ವೀರ ವಿಕ್ರಮಿ ॥ ೩ ॥ ದುರುಳ ಸಚಿವನು ನಿನ್ನ ಕೊಲಲೆಂದೂ । ಯೋಚಿಸಿದ ಕಾರಣ—ಪರಿಭವಕೆ ಸಂದಿರುವ ತಾನಿಂದೂ । ತರಳ

ನವನನೆ ಹೊಂದಿ ಮಡಿದನು | ಬರಿದೆ ಮರುಗುವುದೇಕೆ ಪಾಪಿಗ ? ಳಿರ ಬಹುದೆ ಮೊವಲೆಂದವರನು | ಕರುಣಿಸಿಹೆ ಬೇರೇನ ಬೇಡುವೆ || ವೀರ || ೪ || ಪದುಮಲೋಚನೆ ಕೇಳು ಮಮತೆಯಲೀ | ಬೇರೇನ ಬೇಡೆನು ಮುದದಿ ಬದುಕಿಪುದಿವರ ಕರುಣೆಯಲೀ | ಮದ ಮುಖನು ಮಾಡಿರುವ ಕರ್ಮದೊ | ಳುದುಭವಿಸುವತಿ ಫಲವನುಂಬನು | ಚದುರೆ ಪೇಳುವದೇನ ನಿನ್ನೊಳ | ಗೊದಗಿರುವ ಕಷ್ಟಗಳ ಮಾಣಿಸು || ವೀರ || ೫ ||

ಕಲ್ಯಾಣಿ—ಝುಂಪೆ

ಚಂದಿರಾನನೆ ಬಳಿಕ | ಯಿಂದು ಹಾಸನ ನೋಡಿ | ಮುಂದ ಹಾಸವ ಬೀರು | ತೆಂದಳಿಂತೆಂದೂ || ಕಂದ ನಿನ್ನನು ಕೊಲ್ಲ | ಲೆಂದು ಯತ್ನವ ಗೈದ | ಮುಂದಮತಿಯನು ಕರುಣೆ | ಯಿಂದ ನೀ ಕಾದೇ || ೧ || ಭಳಿರೆ ಮೆಚ್ಚಿದೆ ನಿನಗೆ | ಜಲಜನಾಭನ ದಯೆಯೊ | ಳಿಳೆಯ ಪಾಲಿಸು ನೀನು | ಬಲು ಭಾಗ್ಯ ದಿಂದಾ || ಕಳವಳಿಸ ಬೇಡಿವರ | ಘಳಿಲನೆಬ್ಬಿಸುವೆನೆಂ | ದಳಿದವರ ಮೈ ತಡವೆ | ಸಲೆ ಕರುಣೆಯಿಂದಾ || ೨ || ಭರದಿ ನಿದ್ರೆಯ ತೊರೆದು | ತಿರವೇಳ್ವ ತೆರದಿಂದ | ದುರುಳ ಸಚಿವನು ತನ್ನ ತರಳಸಹಿತಾಗಾ || ಪರಮ ಮಂಗಳೆ ಶಿವೆಯ | ಕರುಣೆಯಿಂದೇಳಲತಿ | ಹರುಷದಿಂ ಸುಮ ಮಳೆಯ | ಸುರರು ಸುರಿಸಿದರೂ || ೩ || ಇಂದಿರೇಶನ ತಂಗಿ | ಯೊಂದು ವೈಷ್ಣವ ಶಕ್ತಿ | ಚಂದ್ರಹಾಸನಿಗಿತ್ತು | ಚಂದದಿಂ ಪರಸೀ || ಮುಂದಿ ಮಾರ್ಬಲಗಳಾ | ನಂದ ದಿಂ ಹೊಗಳುತಿರ | ಲೆಂದಳೀ ತೆರದಿಂದ | ಲಂದು ಮೋದದಲೀ || ೪ ||

ವಾರ್ಧಿಕ

ಜಗದೊಳಾರಾದೊಡಂ ನಿನ್ನ ಚರಿತೆಯನೋದೆ | ಮಿಗೆ ವರ್ಧಿಪುದು ಮುಕುಂದಾಭಿರತಿ ಕಲಿಯುಗದಿ | ಮಗನೆ ತನ್ನಾಜ್ಞೆ ತಪ್ಪದು ಸುಖದಿ ಬಾಳೆಂದು ಪರಸಲತಿಭಕ್ತಿಯಿಂದಾ || ನಿಗಮಾಗಮಾರ್ಚಿತೆಯೆ ಶಿವನರಸಿ ಶಂಕರಿಯೆ | ನಗಧರನ ಸೋದರಿಯೆ ತನ್ನ ರಕ್ಷಿಪುದೆಂದು | ವಿಗಡ ಶಶಿಹಾಸ ಸರ್ವೇಶ್ವರಿಯ ಬೇಡಿಕೊಳೆ ಶಾಂಭವಿಯು ಮಾಯವಾಗೇ || ೧ ||

ಭಾಮಿನಿ

ಹರುಷದೊಳು ಬಂಧುಗಳು ಸಹಿತಲಿ | ಪುರಕೆ ಬಿಜಯಂಗೈದು ತನ್ನನು | ಪೊರೆದಸಿತನನು ಬಿಡಿಸಿ ಹರಿಯನು ನೆನೆಯುತುತ್ಸಹದೀ || ಘುರ ಪರಾಕ್ರಮಿ

ಮಡಿದಿಯರು ಸಹಿ । ತಿರದೆ ಪಟ್ಟವಮೇರೆ ಸತಿಯರು । ವರರತುನ ದಾರತಿಯ ಬೆಳಗಿದರಧಿಕ ಸಂಭ್ರಮದೀ ॥ ೧ ॥

ಢವಳಾರ

ನರಹರಿ ಭಜಕಗೆ । ಶಶಿಹಾಸನಿಗೇ । ನೀರಜಾಕ್ಷಿಗೆ ಮಂತ್ರಿಯ ಕುವರಿಗೆ । ಧಾರಿಣಿಪನ ಸುತೆ ಚಂಪಕ ಮಾಲಿಗೆ । ವೀರಾಧಿವೀರಗಂಭೀರ ವಿಕ್ರಮಗೇ । ಮಾರಾರಿ ಮಡದಿಯನೊಲಿಸೀದ ಬಗೆಗೇ । ಭೂರಿ ಸಂತೋಷದಿ । ನಾರಿಯರೆಲ್ಲರು । ಮೇರುವೆಯಾರತಿಯಾ ಬೆಳಾಗಿರೆ । ಶೋಭಾನವೇ ॥ ೧ ॥

ಸೌರಾಷ್ಟ್ರ—ಏಕತಾಳ

ಗಿರಿಜಾಲೋಲಗೆ ಪರಶಿವಗೇ । ಪುರಸಂಹಾರಗೆ ರುದ್ರನಿಗೆ । ಸುರಮುನಿವಂದ್ಯಗೆ । ಕುರಣಾಕರನಿಗೆ । ಮುರಹರ ಮಿತ್ರಗೆ । ಶಂಕರಗೆ ॥ ಮಂಗಲಂ ಜಯ ಮಂಗಲಂ ಶುಭ ಮಂಗಲಂ ॥ ೧ ॥ ಧರಣಿಯ ಪೊತ್ತಿಹ ಶೇಷನಿಗೇ । ದುರುಳಾಂತಕ ಪುರುಷೋತ್ತಮಗೇ । ನರಹರಿ ರೂಪಗೆ । ನರಕಾಂತಕನಿಗೆ । ಶರಧಿನಿವಾಸಗೆ ಶುಭಕರಗೇ ॥ ಮಂಗಲಂ ಜಯ ಮಂಗಲಂ ಶುಭ ಮಂಗಲಂ ॥ ೨ ॥ ಚಂದಿರವದನೆಗೆ ಪಾರ್ವತಿಗೇ । ಸುಂದರ ರೂಪೆಗೆ ಮಂಗಳೆಗೇ । ಚಂದಿರಹಾಸನ ನಂದದಿ ಸಲಹಿದ । ಮಂದರಗಿರಿಧರ ಸೋದರಿಗೆ ॥ ಮಂಗಲಂ ಜಯ ಮಂಗಲಂ ಶುಭ ಮಂಗಲಂ ॥ ೩ ॥ ರಜತಗಿರೀಶಗೆ ಶರ್ವನಿಗೇ । ಸುಜನೋದ್ಧಾರಗೆ ಭರ್ಗನಿಗೇ । ಗಜಮುಖ ತಾತಗೆ । ಕುಜನ ಸಂಹಾರಗೆ । ಅಜಹರಿ ವಂದ್ಯಗೆ ಪರಮೇಶನಿಗೆ ॥ ಮಂಗಲಂ ಜಯ ಮಂಗಲಂ ಶುಭ ಮಂಗಲಂ ॥ ೪ ॥

ಭಾಮಿನಿ

ಪರಮ ಪುರುಷನ ಕರುಣೆಯಿಂದೀ । ವರ ಮಹಾ ಸತ್ಕಥೆಯನೊರೆದೆನು । ಧರೆಯಮರ ಕುಲತಿಲಕ "ಶಂಕರ" ತನಯ ಪರಶಿವನಾ ॥ ಚರಣ ಕಿಂಕರನಿದನು ಸಜ್ಜನ । ರಿರದೆ ನೋಡುತ ಮೆರೆಸೆ ಜಗದಲಿ । ಕರುಣನಿಧಿಪರಶಿವನು ಸಲಹುವನಿತ್ತು ಭಾಗ್ಯಗಳಾ ॥ ೧ ॥

ಅಂತೂ ಸಂಧಿ ೧ಕ್ಕೆ ಪದ ೩೮೭ಕ್ಕೆ ಮಂಗಳಮಸ್ತು.

ಶ್ರೀ ಶ್ರೀ ಶ್ರೀ

ತಿದ್ದುಪಡಿ

ಪುಟ ೪೦, ಪಂಕ್ತಿ ೨೪ (ಬರಲೆನದಿರದೆ) ಇದ್ದದ್ದು (ಬರಲೆನಗಿರದೆ).

ತಿದ್ದುಪಡಿ

ಪುಟ	ಪಂಕ್ತಿ	ಶುದ್ಧ	ಅಶುದ್ಧ
೨	೧	ತ್ರಿಣಯ	ತೃಣಯ
,,	೧೧	ಪುರಾಣ	ಪೌರಾಣ
೪	೫	ಭೂಧವ	ಭೂದವ
,,	೧೩	ಕಳುಹಿಸಿ	ಕಳುಹಿ
,,	೧೬	ಬವರ	ಭವರ
೫	೭	ಪ್ರಳಯ	ಪ್ರಳಿಯ
೮	೧೧	ದೊರೆಕೊಂಡುದು	ದೊರಕೊಂಡುದು
೯	೧೦	ಳದಿತಿಯ	ಳದಿಯ
೧೨	೨೦	ತನಯ	ತನೆಯ
೧೩	೩	ಪತ್ತನಿಗ	ಪತ್ತಣಿಗ
೧೪	೨	ಮೂಜಗವ	ಮೂಜನ
,,	೧೪	ವ್ರತ	ವೃತ
,,	೨೨	ಧಿಕ್ಕರಿಸಿ	ದಿಕ್ಕರಿಸಿ
೧೬	೧೩	ತರವಲ್ಲಾ	ಥರವಲ್ಲಾ
೧೭	೬	ಸ್ಯಂದನ	ಸ್ಯಂಧನ
೧೯	೨೨	ಕಾರ್ಮುಕ	ಕಾರ್ಮುಖ
೨೦	೨	ಅಲಗ	ಅಲಘ
,,	೧೭	ತ್ರಿದರ್ಶ	ತಿದರ್ಶ
೨೧	೧೮	ಮೇಧಾವಿನಿ	ಮೇದಾವಿನ
೨೨	೩	ಭಕ್ಷ್ಯ	ಭಕ್ಷ
೨೪	೯	ಪ್ರೀತ	ದಾತ
೨೬	೧೮	ಗಾಢದಿ	ಗಾಡದಿ
೨೭	೬	ಶ್ರೇಷ್ಠ	ಶ್ರೇಷ್ಟ
,,	೯	ವಿಸರ	ವಿರಸ
,,	೧೧	ಝುಷ	ಝುಸ
,,	೧೯	ವಿಧು	ವಿದು
೨೮	೧೪	ತೆರೆ	ತರೆ
೩೦	೧೪	ಶಾರಿಕ	ಸಾರಿಕ

ಪುಟ	ಪಂಙ್ತ್ತಿ	ಶುದ್ಧ	ಅಶುದ್ಧ
೩೨	೧	ಚಾತುರ್ಥಿ	ಚಾತೂರ್ಥಿ
,,	೮	ಶ್ರೇಷ್ಠ	ಶ್ರೇಷ್ಟ
,,	೧೪	ಮರ್ದನ	ಮರ್ಧನ
೩೩	೩	ಏನೆಂದು	ಏನಂದು
,,	೬	ವಿಧು	ವಿದು
,,	೧೯	ಮದನನನು	ಮದನನು
೩೪	೧೨	ಏಕೆ	ಏತಕೆ
೩೫	೮	ಆಶೀರ್ವದಿಸಿ	ಆಶಿರ್ವದಿಸಿ
,,	೨೨	ತರಣಿ	ತರುಣಿ
೩೬	೧೧	ಪೃಥುಳ	ಪ್ರತುಳ
೩೮	೮	ವಿಧು	ವಿದು
೩೯	೪	ಗಂಧರುವ	ಗಂಧರುಹ
,,	೧೦	ಪೊಗಳ್ವ	ಪೊಗಳ್ಪ
,,	೧೦	ಕೇಳೊಳ್ಳಿ	ಕೇಳ್ವಳ್ಳಿ
,,	೧೧	ಚಂದಿರಾಸ್ಯೆ	ಚಂದಿರಾನೆ
೪೦	೧೮	ಅರಸಿ	ಅರಿಸಿ
೪೧	೫	ಗಡಣ	ಗಡಗಣ
,,	೧೪	ಕಾಷ್ಠ	ಕಾಷ್ಟ
,,	೧೯	ಪೃಥಿವಿ	ಪೃಥುವಿ
೪೨	೬	ಬಾಳ್ವಿನೆ	ಬಾಳ್ಪೆನೆ
,,	೨೨	ರೋದಿಸ	ರೋಧಿಸ
೪೩	೧೦	ಕಾಗಿ	ಗಾಗಿ
,,	೧೬	ದೃಢ	ಧೃಢ
,,	೧೮	ಕುಂಡ	ಕೊಂಡ
೪೬	೨	ವರವನು	ವರನು
,,	೨೧	ನೆಗಳ್ದ	ವಿಗಡ
೪೭	೧	ಮಡದಿ	ಮಡಿದಿ
,,	೨೦	ಮೆರಸೆ	ಮೆರೆಸೆ

SRI NARAYAN GURU PRESS
MANGALORE